# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

## ತರಗತಿ
## STANDARD

## III

## ಭಾಗ - 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - III (Part 2)

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗಲಿ. ಕೆಲವರ ಭಾಷಾ ಶೈಲಿಯೇ ಅವರನ್ನು ಗುರುತಿಸುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯುತ್ತೇವೆ.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕರು, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರು, ಹಿತೈಷಿಗಳೂ ಆಗುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
## KANNADA III - PART II

**Advisor**

| | |
|---|---|
| Shivashankara P. | Asst. Professor, GPM College, Manjeshwar. |

**Chairperson**

| | |
|---|---|
| Dr. Vedavathi | Asst. Professor, Government College, Kasaragod. |

**Experts**

| | |
|---|---|
| Dr. M.N. Mahesha | HOD, Kannada Department, Madurai Kamaraj, Chennai. |

**Participants**

| | |
|---|---|
| Balakrishna P. | Rtd. HM, GLPS Kunjathur. |
| Shivarama Bhat | HM, GLPS Kayarkatte. |
| Smt. Jyothi N. | HM, GLPS Kannur. |
| Smt. Seema Suvarna | HM, GBLPS Ujarulwar. |
| Mohana U. | PD Tr, GHSS Bangramanjeshwar. |
| Salaudeen | LPST, GHSS Angadimogar. |
| Anil Kumar U. | LPST, GWLPS Bela. |
| Melvin D'Souza P. | LPST, GHSS Bekur. |

**Artists**

| | |
|---|---|
| Bala Madhurakanana | Rtd. Drawing Teacher, MSCHSS Nirchal. |
| Divakar | Rtd. Drawing Teacher, Kasaragod. |
| Prakash | Drawing Teacher, BRC Manjeshwara. |
| Satheesh | Drawing Teacher, BRC Kumbla. |

**Academic Co-ordinator**

Dr. Sahaya Dhas D.
Research Officer, SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| 5. | ಆರೋಗ್ಯವೇ ಭಾಗ್ಯ | 79 - 88 |
| | • ಆರೋಗ್ಯವೇ ಸಂಪತ್ತು (ಸಂಭಾಷಣೆ) | |
| | • ಶುಚಿತ್ವದ ಮಹತ್ವ (ಲೇಖನ) | |
| 6. | ಸ್ವರಕ್ಷೆಯೇ ಸುರಕ್ಷೆ | 89 - 97 |
| | • ಸ್ವರಕ್ಷೆ (ಕಥೆ) | |
| | • ನಮ್ಮ ಯೋಧರು (ಪದ್ಯ) | |
| 7. | ದುಡಿಮೆಯೇ ದೇವರು | 98 - 106 |
| | • ಕೆಲಸಗಾರರು (ಪದ್ಯ) | |
| | • ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ (ಕಥೆ) | |
| 8. | ಕಾಲಗಳೇ ಮುನಿಯದಿರಿ | 107 - 118 |
| | • ಯಾವುದು ಇಷ್ಟ? (ಪದ್ಯ) | |
| | • ತಾಳ್ಮೆಯ ಫಲ (ಕಥೆ) | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# 5 ಆರೋಗ್ಯವೇ ಭಾಗ್ಯ

'ಶಾರೀರಿಕ, ಮಾನಸಿಕ ಹಾಗೂ ಸಾಮಾಜಿಕವಾದ ಸುಸ್ಥಿತಿಯೇ ಆರೋಗ್ಯ' ಎಂದು ನಿರ್ವಚಿಸಲಾಗಿದೆ. ಉತ್ತಮ ಆಹಾರ ಅಭ್ಯಾಸಗಳು, ಶುಚಿತ್ವ ಚಟುವಟಿಕೆಗಳು, ದೈಹಿಕ ಸದೃಢತೆ ಮೊದಲಾದವುಗಳು ಆರೋಗ್ಯದ ಕೀಲಿಗಳಾಗಿವೆ. ಆಧುನಿಕ ಜೀವನ ಶೈಲಿ ಹಾಗೂ ಆಹಾರ ಕ್ರಮವನ್ನು ನಿಯಂತ್ರಿಸಿ ಆರೋಗ್ಯವನ್ನು ಕಾಪಾಡೋಣ.

## ಜಾಡಮಾಲಿ

ಕಡುಕತ್ತಲೆಯಂತಿದೆ ದೇಹ
ಬಲು ಕರ್ಕಶವಾಗಿದೆ ಶಬ್ದ
ಬಿರುಬಿಸಿಲಲಿ ಮಾಡುವೆ ಕೆಲಸ
ಕೊಳೆ ಹೆಕ್ಕುವೆ ನೀ ಪ್ರತಿ ದಿವಸ
ದಿನ ಬೆಳಗುವ ಮೊದಲೇ ಬರುವೆ
ಮನೆ ಮಂದಿಯ ನಿದ್ದೆಯ ತೊಳೆವೆ
ನೀ ಕಾಗುಣಿತಾಕ್ಷರ ಉಲಿವೆ
ಮನೆಯಂಗಳದಲಿ ನೀನಲೆವೆ
ತುರು ಮಲಗಿರೆ ಹೇಳುವೆ ಗುಟ್ಟು
ಹಿರೆ ಚುಂಚನು ಕಿವಿಯೊಳಗಿಟ್ಟು
ಹಸಿದರೆ ಕಿವಿಕೊರೆಯುವೆ ಬಂದು
ಮುನಿದರೆ ನೀ ಕರೆಯುವೆ ದಂಡು
ಬೆಳೆ ಕೊಲ್ಲುವ ಹುಳಗಳ ತಿಂದು
ನೀನಾಗಿಹೆ ರೈತನ ಬಂಧು
ಬಾ ಹತ್ತಿರ ಕೊಡುವೆನು ಒಂದು
ಸಿಹಿ ರೊಟ್ಟಿಯ ತುಂಡನು ಇಂದು.



- **ಪದ್ಯದ ಸಾಲುಗಳನ್ನು ಗದ್ಯರೂಪದಲ್ಲಿ ಬದಲಾಯಿಸಿ ಬರೆಯಿರಿ.**

**ಮಾದರಿ :**

ಕಡುಕತ್ತಲೆಯಂತಿದೆ ದೇಹ
ದೇಹವು ಕತ್ತಲೆಯಂತೆ ಕಪ್ಪಾಗಿದೆ.



- ಬಿರುಬಿಸಿಲಲಿ ಮಾಡುವೆ ಕೆಲಸ
- ಕೊಳೆ ಹೆಕ್ಕುವೆ ನೀ ಪ್ರತಿ ದಿವಸ
- ಹಸಿದರೆ ಕಿವಿಕೊರೆಯುವೆ ಬಂದು
- ಬೆಳೆ ಕೊಲ್ಲುವ ಹುಳಗಳ ತಿಂದು

# ಆರೋಗ್ಯವೇ ಸಂಪತ್ತು

ಡಾಕ್ಟರ್ : ನಿನ್ನ ಹೆಸರೇನಮ್ಮ?

ಕಾವ್ಯ : ಕಾವ್ಯ.

ಡಾಕ್ಟರ್ : ಏನಾಯಿತು ಕಾವ್ಯ?

ಕಾವ್ಯ : ಡಾಕ್ಟರ್, ನಿನ್ನೆಯಿಂದ ಹೊಟ್ಟೆ ನೋಯುತ್ತಿದೆ.

ಡಾಕ್ಟರ್ : ಓಹೋ.. ಸರಿ, ನಿನ್ನೆ ಏನೇನು ತಿಂದಿದ್ದೆ ಹೇಳು......

ಕಾವ್ಯ : ನಿನ್ನೆ ಬೆಳಗ್ಗೆ ಇಡ್ಲಿ , ಚಟ್ನಿ... ಮಧ್ಯಾಹ್ನ ಮೊಸರನ್ನ... ಮತ್ತೆ ರಾತ್ರಿ ಅನ್ನ ಸಾಂಬಾರಿನ ಊಟ ಮಾಡಿದ್ದೆ ಸರ್.

ಡಾಕ್ಟರ್ : ನಿಮ್ಮ ಮನೆಗೆ ಕುಡಿಯುವ ನೀರನ್ನು ಎಲ್ಲಿಂದ ತರುತ್ತೀರಿ?

ಕಾವ್ಯ : ಮನೆಯ ಮುಂದೆ ಸಾರ್ವಜನಿಕ ನಲ್ಲಿ ಇದೆ. ಅದರಿಂದ ನೀರು ತರುತ್ತೇವೆ ಸರ್.

ಡಾಕ್ಟರ್ : ಅದನ್ನು ಹಾಗೆಯೇ ಕುಡಿಯಲು ಬಳಸುತ್ತೀರಾ?



ಅಮ್ಮ : ಇಲ್ಲ ಡಾಕ್ಟ್ರೇ. ಕುದಿಸಿ ಆರಿಸಿದ ನಂತರವೇ ಉಪಯೋಗಿಸುತ್ತೇವೆ.

ಡಾಕ್ಟರ್ : ನಿಮ್ಮ ಮನೆ ಮತ್ತು ಸುತ್ತಲಿನ ಪರಿಸರ ಶುಚಿಯಾಗಿದೆಯೇ?

ಕಾವ್ಯ : ಹೌದು ಸರ್.

ಡಾಕ್ಟರ್ : ಸರಿ. ಬಾಯಿ ತೆರೆ.. ನಾಲಗೆ ನೋಡುವ.. ಕಣ್ಣು ನೋಡುವ. ದೀರ್ಘವಾಗಿ ಉಸಿರಾಡು.

ಉಗುರು ತೋರಿಸು..

ನೋಡು ಕಾವ್ಯ, ಹೆದರಬೇಡ. ನಿನ್ನ ಮನೆಯೊಳಗೆ ಮತ್ತು ಹೊರಗೆ ಸ್ವಚ್ಛವಾಗಿದೆ. ನೀವು ಕುದಿಸಿ ಆರಿಸಿದ ನೀರನ್ನು ಕುಡಿಯುತ್ತಿದ್ದೀರಿ, ನಿನ್ನೆ ಸೇವಿಸಿದ್ದೆಲ್ಲವೂ ಒಳ್ಳೆಯ ಆಹಾರವೇ ಆಗಿದೆ. ನೀನು ಸ್ನಾನ ಮಾಡಿ ಶುಭ್ರವಾದ ಬಟ್ಟೆಯನ್ನು ಧರಿಸಿ ಬಂದಿರುವೆ. ನಿನ್ನ ಉಗುರುಗಳು ಸ್ವಚ್ಛವಾಗಿವೆ. ಹಾಗಾದರೆ ಹೊಟ್ಟೆನೋವು ಬರಲು ಕಾರಣವೇನಾಗಿರಬಹುದು?

ಕಾವ್ಯ : ಗೊತ್ತಿಲ್ಲ ಸರ್.

ಡಾಕ್ಟರ್ : ನಿನ್ನ ನಿತ್ಯದ ಆಹಾರವಲ್ಲದೆ ಮತ್ತೆ ಏನಾದರೂ ತಿಂದಿದ್ದೀಯಾ?

ಕಾವ್ಯ : ಅದೂ... ಅದು... ಸರ್.

ಡಾಕ್ಟರ್ : ಯಾಕೆ? ಯಾಕೆ ಭಯ?

ಕಾವ್ಯ : ನಿನ್ನೆ ಬೆಳಗ್ಗೆ ಶಾಲೆಯ ಹೊರಗೆ ಮಾರುತ್ತಿದ್ದ ಕರಿದ ತಿಂಡಿಯನ್ನು ತಿಂದಿದ್ದೆ. ಆದರೆ ಅಮ್ಮ ಬೈಯ್ಯುತ್ತಾಳೆ ಎಂದು ನಾನು ಹೇಳಲಿಲ್ಲ.

ಡಾಕ್ಟರ್ : ನೋಡಿದೆಯಾ.. ನಿನ್ನ ಹೊಟ್ಟೆನೋವಿಗೆ ಕಾರಣ ನಿನ್ನ ಬಳಿಯೇ ಇದೆ. ರಸ್ತೆ ಬದಿಯಲ್ಲಿ ಮಾರುವ ತಿಂಡಿ ತಿನಿಸುಗಳನ್ನು ತಿನ್ನಬಾರದೆಂದು ನೀನು ಓದಿದ್ದೀಯಲ್ಲವೇ. ಅಂತಹ ಪದಾರ್ಥಗಳ

ಮೇಲೆ ಧೂಳು ಕೂತಿರುತ್ತದೆ. ನೊಣ, ಹಾಗೂ ಕ್ರಿಮಿ- ಕೀಟಗಳಿಂದ ಮಲಿನಗೊಂಡಿರುತ್ತವೆ ಗೊತ್ತಾಯಿತಲ್ಲ..... ಈಗ ಈ ಔಷಧಿಯನ್ನು ಎರಡು ದಿನ ಸೇವಿಸು. ಮುಂದೆ ಯಾವತ್ತೂ ರಸ್ತೆ ಬದಿಯ ತಿಂಡಿ ತಿನಿಸುಗಳನ್ನು ತಿನ್ನಬೇಡ, ಅದು ಆರೋಗ್ಯಕ್ಕೆ ಒಳ್ಳೆಯದಲ್ಲ.

ಕಾವ್ಯ : ಇನ್ನು ಮುಂದೆ ಹಾಗೆ ಮಾಡುವುದಿಲ್ಲ ಸರ್.

- ಸಂಗ್ರಹ

## ಚಟುವಟಿಕೆಗಳು

### ಉತ್ತರಿಸಿರಿ

- ಕಾವ್ಯಳಿಗೆ ಹೊಟ್ಟೆನೋವು ಬರಲು ಕಾರಣವೇನು?
- ಆಹಾರ ವಸ್ತುಗಳು ಯಾವೆಲ್ಲಾ ರೀತಿಯಲ್ಲಿ ಮಲಿನಗೊಳ್ಳುತ್ತವೆ?

### ಟಿಪ್ಪಣಿ ಬರೆಯಿರಿ

ಆರೋಗ್ಯವೇ ಭಾಗ್ಯವೆಂಬ ಮಾತು ಸತ್ಯವೆಂದು ತಿಳಿಯಿತಲ್ಲವೇ. ರೋಗ ಬಾರದ ಮನುಷ್ಯರಿಲ್ಲ. ನಿಮಗೆಂದಾದರೂ ಅಸೌಖ್ಯ ಉಂಟಾಗಿದ್ದರೆ, ನಿಮ್ಮ ಅನುಭವವನ್ನು ಟಿಪ್ಪಣಿಯಾಗಿ ಬರೆಯಿರಿ.

### ಈ ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ವಿರೋದಾರ್ಥ ಬರುವ ಪದಗಳನ್ನು ಬಳಸಿ ವಾಕ್ಯಗಳನ್ನು ಪೂರ್ತಿಗೊಳಿಸಿರಿ.

- <u>ಸ್ವಚ್ಛ</u>ವಾದ ನೀರನ್ನು ಕುಡಿಯಬೇಕು. .................... ನೀರನ್ನು ಕುಡಿಯಬಾರದು.
- <u>ಬೆಳಕು</u> ಇರುವ ಸ್ಥಳದಲ್ಲಿ ಓದಬೇಕು. .................... ಇರುವ ಸ್ಥಳದಲ್ಲಿ ಓದಬಾರದು.

- ಶುಭ್ರವಾದ ಬಟ್ಟೆಯನ್ನು ಧರಿಸಬೇಕು. .................................. ಬಟ್ಟೆಯನ್ನು ಧರಿಸಬಾರದು.
- ಆರೋಗ್ಯವೇ ಸಂಪತ್ತು. ..................... ಆಪತ್ತು

## ಈ ಕೆಳಗಿನ ಪದಗಳನ್ನು ವಿಂಗಡಿಸಿ ಬರೆಯಿರಿ

1. ಆಹಾರವಲ್ಲದೆ - ........................................................
2. ಮನೆಯೊಳಗೆ - ........................................................
3. ಶುಭ್ರವಾದ - ........................................................
4. ಸ್ವಚ್ಛವಾಗಿದೆ - ........................................................
5. ಏನಾದರೂ - ........................................................
6. ಕಾರಣವೇನಾಗಿರಬಹುದು - ........................................................

## ಅಭಿನಯಿಸುವ

- ಡಾಕ್ಟರ್ ಮತ್ತು ಕಾವ್ಯಳ ಸಂಭಾಷಣೆಗಳನ್ನು ಬಳಸಿಕೊಂಡು ನಾಟಕವಾಗಿ ಅಭಿನಯಿಸಿರಿ.

ಅದೊಂದು ದಿನ ಶಾಲೆಗೆ ರಜೆಯಾಗಿತ್ತು. ಮನು ಅಂದು ಬೆಳಗ್ಗೆ ಬೇಗನೆ ಎದ್ದನು. ಮನುವಿಗೆ ಪ್ರತಿದಿನ ದಿನಪತ್ರಿಕೆಯನ್ನು ಪುಟ ತಿರುಗಿಸಿ ನೋಡುವ ಹವ್ಯಾಸವಿತ್ತು.

# ಶುಚಿತ್ವದ ಮಹತ್ವ



ಮನು, ಅಂದಿನ ದಿನಪತ್ರಿಕೆಯನ್ನು ಕೈಗೆತ್ತಿಕೊಂಡು ಓದತೊಡಗಿದನು. ಅದರಲ್ಲಿ ಆರೋಗ್ಯ ಇಲಾಖೆಯವರು ನೀಡಿದ ವ್ಯಕ್ತಿ ಶುಚಿತ್ವಕ್ಕೆ ಸಂಬಂಧಿಸಿದ ಸುದ್ದಿಯನ್ನು ನೋಡಿದನು. ಏನೂ ಅರ್ಥವಾಗದೆ ತಲೆಕೆಡಿಸಿಕೊಂಡವನಂತೆ ಕುಳಿತನು. ಆಗ ರಂಗಯ್ಯನವರು, “ಏನು ಆಲೋಚಿಸುತ್ತಿರುವೆ?” ಎಂದು ಮನುವಿನಲ್ಲಿ ಕೇಳಿದರು. “ಅಪ್ಪ, ವೈಯಕ್ತಿಕ ಶುಚಿತ್ವವೆಂದರೇನು?” ಎಂದು ಕೇಳಿದನು. “ಓ...! ಅದು ನಿನ್ನ ಸಂಶಯವೋ!” ಎನ್ನುತ್ತಾ, ರಂಗಯ್ಯನವರು ಮನುವಿನ ಕೈಯಲ್ಲಿದ್ದ ದಿನಪತ್ರಿಕೆಯನ್ನು ತೆಗೆದುಕೊಂಡರು. “ನೋಡು ಮಗು, ಈ ವಾರ್ತೆಯಲ್ಲಿ ನಾವು ದಿನನಿತ್ಯ ಪಾಲಿಸಬೇಕಾದ ವ್ಯಕ್ತಿ ಶುಚಿತ್ವದ ಬಗ್ಗೆ ಸೂಚನೆಗಳನ್ನು ನೀಡಿದ್ದಾರೆ” ಎಂದರು.

"ಪ್ರತಿದಿನ ಬೆಳಿಗ್ಗೆ ಮತ್ತು ರಾತ್ರಿ ಹಲ್ಲು ಉಜ್ಜಬೇಕು, ಸ್ನಾನ ಮಾಡಬೇಕು. ಆಹಾರ ಸೇವನೆಯ ಮೊದಲು ಮತ್ತು ನಂತರ ಕೈತೊಳೆಯಬೇಕು, ಉಗುರುಗಳನ್ನು ಕತ್ತರಿಸಬೇಕು. ಮನೆಯಿಂದ ಹೊರಗೆ ಹೋಗುವಾಗ ಚಪ್ಪಲಿ ಧರಿಸಬೇಕು. ಶುಚಿಯಾದ ವಸ್ತ್ರ ಧರಿಸಬೇಕು. ಇದನ್ನು ವೈಯಕ್ತಿಕ ಶುಚಿತ್ವ ಎಂದು ಕರೆಯುತ್ತೇವೆ. ಇವುಗಳನ್ನು ತಪ್ಪದೇ ಪಾಲಿಸಬೇಕು. ಈ ರೀತಿಯಲ್ಲಿ ವೈಯಕ್ತಿಕ ಶುಚಿತ್ವವನ್ನು ಪಾಲಿಸದೆ ಇದ್ದರೆ ನಾವು ಹಲವು ರೋಗಗಳಿಗೆ ತುತ್ತಾಗುವ ಸಾಧ್ಯತೆ ಇದೆ" ಎಂದು ವಿವರವಾಗಿ ರಂಗಯ್ಯನವರು ಮಗನಿಗೆ ಹೇಳಿದರು. ಅಪ್ಪನ ಮಾತನ್ನು ಕೇಳಿದ ಮನು, "ಅಪ್ಪ ನಾನಿನ್ನೂ ಸ್ನಾನ ಮಾಡಿಲ್ಲ, ಹಲ್ಲು ಉಜ್ಜಿಲ್ಲ. ಇನ್ನು ಮುಂದೆ ಶುಚಿತ್ವದ ಎಲ್ಲಾ ಅಭ್ಯಾಸಗಳನ್ನು ಸಮಯಕ್ಕೆ ಸರಿಯಾಗಿ ಮಾಡುತ್ತೇನೆ" ಎಂದು ಹೇಳುತ್ತಾ ಬಚ್ಚಲುಮನೆಗೆ ಓಡಿದನು.

- ಸಂಗ್ರಹ

## ಚಟುವಟಿಕೆಗಳು

**ಪಾಠಭಾಗವನ್ನು ಓದಿ ಈ ಕೆಳಗಿನ ಪದಗಳ ಸಮಾನಾರ್ಥ ಪದಗಳಿಗೆ ಪಾಠಭಾಗದಲ್ಲಿ ಉರುಟು ಹಾಕಿರಿ.**

ವ್ಯಕ್ತಿ ಶುಚಿತ್ವ    ಬಟ್ಟೆ    ತಂದೆ

ಸ್ನಾನಗೃಹ

ಇರುಳು    ಈಡಾಗುವ    ದಂತ

## ಉತ್ತರಿಸಿರಿ

1. ಮನುವಿನ ಹವ್ಯಾಸ ಏನಾಗಿತ್ತು?
2. ದಿನಪತ್ರಿಕೆಯಲ್ಲಿ ಯಾವ ವಿಷಯಕ್ಕೆ ಸಂಬಂಧಿಸಿದ ಸುದ್ದಿಯನ್ನು ನೀಡಲಾಗಿತ್ತು?

## ಪದಸೂರ್ಯ ಪೂರ್ತಿಗೊಳಿಸಿರಿ.




**ಪದಸೂರ್ಯದ ಆಧಾರದಲ್ಲಿ ವೈಯಕ್ತಿಕ ಶುಚಿತ್ವದ ಮಹತ್ವವನ್ನು ಟಿಪ್ಪಣಿಯಾಗಿ ಬರೆಯಿರಿ.**

## ಕೋಣೆಯೊಳಗಿರುವ ಪದಗಳನ್ನು ಬಳಸಿಕೊಂಡು ವಾಕ್ಯಗಳನ್ನು ರಚಿಸಿರಿ.

| | | |
|---|---|---|
| ಅವನು | ಸ್ನಾನ | ಮಾಡಿದನು |
| ಅವಳು | ಊಟ | ಮಾಡಿದಳು |
| ಅವರು | ನಿದ್ದೆ | ಮಾಡಿದರು |

## ಪರಿಸರ ಶುಚಿತ್ವವನ್ನು ತಿಳಿಸುವ ಕೆಲವು ಸೂಚನಾ ವಾಕ್ಯಗಳನ್ನು ಬರೆದು ಸೂಕ್ತ ಸ್ಥಳಗಳಲ್ಲಿ ಅಂಟಿಸಿರಿ.

## ಅಕ್ಷರದಿಂದ ಪದ ರಚಿಸಿರಿ

| | | |
|---|---|---|
| ತ್ರಿ | ಪ | ಕೆ |
| ರು | ಗು | ಉ |
| ಚ | ಲಿ | ಪ್ಪ |
| ಚಿ | ತ್ವ | ಶು |
| ವ್ಯಾ | ಸ | ಹ |
| ಭ್ಯಾ | ಅ | ಸ |
| ಖಿ | ಲಾ | ಇ |



### ವಿಶ್ವ ಯೋಗ ದಿನ
### ಜೂನ್ 21

2014 ಡಿಸೆಂಬರ್ 11 ರಂದು ಯುಕ್ತರಾಷ್ಟ್ರ ಸಂಘವು ಜೂನ್ 21 ನ್ನು 'ವಿಶ್ವ ಯೋಗ ದಿನ'ವೆಂದು ಘೋಷಿಸಿತು.

# ಕಲಿಕಾ ಕಣಜ



| ವಿಷಯಗಳು | ಚಟುವಟಿಕೆಗಳು |
|---|---|
| ನೋಟ್ ಪುಸ್ತಕ | ಪ್ರವೇಶ ಚಟುವಟಿಕೆ, ಉತ್ತರಿಸಿರಿ, ಟಿಪ್ಪಣಿ ಬರೆಯಿರಿ, ವಾಕ್ಯ ರಚನೆ, ವಿಂಗಡಿಸಿ ಬರೆಯಿರಿ, ಉರುಟು ಹಾಕಿರಿ, ಪ್ರಶ್ನೋತ್ತರ, ಟಿಪ್ಪಣಿ, ವಾಕ್ಯ ರಚನೆ, ಅಕ್ಷರದಿಂದ ಪದ ರಚನೆ. |
| ಪಠ್ಯ ಪುಸ್ತಕ | ವಾಕ್ಯ ರಚನೆ, ವಿಂಗಡಿಸಿ ಬರೆಯಿರಿ, ಉರುಟು ಹಾಕಿರಿ, ಪದಸೂರ್ಯ, ಅಕ್ಷರದಿಂದ ಪದ ರಚನೆ. |
| ಪೋರ್ಟ್‌ಫೋಲಿಯೊ | ರಚನೆಗಳು |
| ಭಿತ್ತಿಪತ್ರಿಕೆ | ರಚನೆಗಳು |
| ಬಾಲಸಭೆ | ಅಭಿನಯ |

# 6 ಸ್ವರಕ್ಷೆಯೇ ಸುರಕ್ಷೆ

ಸ್ವರಕ್ಷೆಯನ್ನು ಕಡೆಗಣಿಸಿ ದೇಶದ ಸಂಪೂರ್ಣ ಸುರಕ್ಷೆಯನ್ನು ನಿಭಾಯಿಸುತ್ತಿರುವ ಹಲವಾರು ವೀರ ಯೋಧರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದಾರೆ. ಸೈನಿಕರು, ಆರಕ್ಷಕ ದಳ, ಅಗ್ನಿಶಾಮಕ ದಳ ಮೊದಲಾದ ದಳಗಳ ಯೋಧರು ನಿದ್ರಾಹಾರಗಳನ್ನು ಲೆಕ್ಕಿಸದೆ ತದೇಕಚಿತ್ತದಿಂದ ವೀರ ಶೂರ ಪರಾಕ್ರಮದಿಂದ ದೇಶಕ್ಕಾಗಿ ಹೋರಾಡುತ್ತಿದ್ದಾರೆ. ಇವರಿಗೆ ನಾವು ಕೃತಜ್ಞತೆಗಳನ್ನು ಸಲ್ಲಿಸೋಣ.

**ಚಿತ್ರಗಳಿಗೆ ಸೂಕ್ತವಾದ ಹೆಸರುಗಳನ್ನು ಜೋಡಿಸಿರಿ**



# ಸ್ವರಕ್ಷೆ

ಸಂಜೆ ಶಾಲೆಯ ಗೇಟಿನ ಬಳಿ ಹಲವಾರು ಮಂದಿ ರಕ್ಷಕರು ತಮ್ಮ ಮಕ್ಕಳನ್ನು ಕರೆದೊಯ್ಯಲು ಕಾದು ನಿಂತಿದ್ದರು. ಟಣ್... ಟಣ್... ಟಣ್... ಟಣ್... ಟಣ್... ಟಣ್... ಗಂಟೆ ಬಾರಿಸಿತು. "ಹೋ...." ಎಂಬ ಶಬ್ದದೊಂದಿಗೆ ಮಕ್ಕಳು ಗೇಟಿನ ಕಡೆಗೆ ಧಾವಿಸಿದರು. ಕಾದುನಿಂತಿದ್ದ ತಮ್ಮ ರಕ್ಷಕರ ಕೈ ಹಿಡಿದುಕೊಂಡು ಮನೆಯ ಕಡೆ ಹೊರಟರು. ಕೆಲವರು ಪಾದಚಾರಿಗಳಾಗಿ, ಮತ್ತೆ ಕೆಲವರು ಸ್ವಂತ ವಾಹನಗಳಲ್ಲಿ, ಉಳಿದವರು ರಿಕ್ಷಾ ಗಾಡಿಗಳಲ್ಲಿಯೂ ಹೋದರು.

ರಾಣಿಯು ಗೇಟಿನ ಬಳಿ ತಂದೆಯನ್ನು ಕಾಯುತ್ತಾ ನಿಂತಿದ್ದಾಳೆ. 'ಅಪ್ಪ ಯಾಕೆ ಬರಲಿಲ್ಲ? ಬರುವ ಸಮಯ ಕಳೆಯಿತಲ್ಲ'. ಇತ್ತೀಚೆಗೆ ಟೆಲಿವಿಷನ್, ಪತ್ರಿಕೆ, ಮೊದಲಾದ ವಾರ್ತಾ ಮಾಧ್ಯಮಗಳಲ್ಲಿ ಬಂದಿರುವ ಸುದ್ದಿಗಳು ಅವಳ ಮನದಲ್ಲಿ ಮೂಡಿದುವು. ಅವಳಿಗೆ ಭಯವಾಗತೊಡಗಿತು.



'ಕೀ....ಕೀ...' ಒಂದು ಕಾರು ಬಂದು ಅವಳ ಹತ್ತಿರ ನಿಂತಿತು. ಒಬ್ಬ ಯುವಕ ಕಾರಿನಿಂದಿಳಿದು ಬಂದನು. "ರಾಣಿ... ನಿನ್ನನ್ನು ಕರೆದುಕೊಂಡು ಹೋಗಲು ನಿನ್ನ ಅಪ್ಪ ನನ್ನನ್ನು ಕಳುಹಿಸಿದ್ದಾರೆ. ನಿನ್ನ ಅಮ್ಮ ಆಸ್ಪತ್ರೆಯಲ್ಲಿದ್ದಾರೆ." ಅಪರಿಚಿತ ವ್ಯಕ್ತಿಯನ್ನು ಕಂಡು ರಾಣಿ ಹೆದರಿದಳು. "ಇಲ್ಲ ನಾನು ಬರುವುದಿಲ್ಲ. ನನ್ನ ತಂದೆ ಬರ್ತಾರೆ."

"ಇಲ್ಲ ನಿನ್ನ ತಂದೆ ಬರುವುದಿಲ್ಲ. ಅವರು ಅಮ್ಮನ ಹತ್ತಿರ ಆಸ್ಪತ್ರೆಯಲ್ಲಿದ್ದಾರೆ. ಬಾ..." ಎಂದು ಯುವಕ ರಾಣಿಯ ಕೈಯನ್ನು ಹಿಡಿದನು. 'ಟಮಾರ್... ಪಟಾರ್... ಚಟಾರ್...' ಎನ್ನುವ ಶಬ್ದ ಮಾತ್ರ ಕೇಳಿಸಿತು. "ಅಯ್ಯೋ... ಅಮ್ಮಾ..." ಎನ್ನುತ್ತಾ ಯುವಕ ರಸ್ತೆಯಲ್ಲಿ ಹೊರಳಾಡುತ್ತಿದ್ದನು.

ಜನರು ಸೇರಿದರು. ಅಷ್ಟರಲ್ಲಿ ರಾಣಿಯ ತಂದೆ ಬಂದರು. ಊರಿನವರು ಯುವಕನನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದರು. ರಾಣಿಯು ತಂದೆಯೊಂದಿಗೆ ಕಾರಿನಲ್ಲಿ ಕುಳಿತು ನಡೆದ ಘಟನೆಗಳನ್ನು ವಿವರಿಸಿದಳು. "ನೀನು ತಕ್ಕ ಸಮಯಕ್ಕೆ ಸರಿಯಾದ ರೀತಿಯಲ್ಲಿ ವರ್ತಿಸಿದ ಕಾರಣ ದೊಡ್ಡ ಅಪಾಯದಿಂದ ಪಾರಾದೆ. ನೀನು ಕಲಿಯುತ್ತಿರುವ ಕರಾಟೆ ನಿನ್ನನ್ನು ಕಾಪಾಡಿತು."

- ಸಂಗ್ರಹ

## ಚಟುವಟಿಕೆಗಳು

### ಊಹಿಸಿ ಬರೆಯಿರಿ

- ಈ ಕಥೆಯಲ್ಲಿ ಬರುವ ರಾಣಿಯ ಬದಲು ನೀವಾಗಿರುತ್ತಿದ್ದರೆ ಏನು ಮಾಡುತ್ತಿದ್ದೀರಿ?
- ರಾಣಿಯು ಅಪಾಯದಿಂದ ಹೇಗೆ ಪಾರಾದಳು?

## ಪಾಠಭಾಗದಿಂದ ಸಮಾನ ಆಶಯವಿರುವ ಸಾಲುಗಳನ್ನು ಹುಡುಕಿ ಬರೆಯಿರಿ.

- ಮಕ್ಕಳು ವಿವಿಧ ರೀತಿಯಲ್ಲಿ ಶಾಲೆಯಿಂದ ಮನೆಗೆ ಹೋಗುತ್ತಿದ್ದರು.
- ರಾಣಿಯು ಯುವಕನಿಗೆ ಚೆನ್ನಾಗಿ ಒದೆದಳು.
- ತಂದೆಯು ರಾಣಿಯ ಸಾಹಸವನ್ನು ಹೊಗಳಿದರು.

## ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿ ವಾಕ್ಯಗಳನ್ನು ರಚಿಸಿರಿ.

1. ಮಕ್ಕಳು ಶಾಲೆ ಬಿಟ್ಟು ಮನೆಗೆ ತೆರಳಿದರು.

   ..................................................................

2. ರಾಮನು ಸ್ವಂತ ಕಾರಿನಲ್ಲಿ ಹೋದನು.

   ..................................................................

3. ರಾಣಿಗೆ ಭಯವಾಯಿತು.

   ..................................................................

## ರಾಣಿಯ ದಿನಚರಿ

ಮನೆಗೆ ತಲುಪಿದ ರಾಣಿಯು ಅಂದು ನಡೆದ ಘಟನೆಗಳನ್ನು ದಿನಚರಿಯಾಗಿ ಬರೆದಳು. ಅವಳು ದಿನಚರಿಯಲ್ಲಿ ಏನೆಲ್ಲಾ ಬರೆದಿರಬಹುದೆಂದು ಊಹಿಸಿ ಬರೆಯಿರಿ.

# ನಮ್ಮ ಯೋಧರು

- ಬಿ. ಸತ್ಯವತಿ ಎಸ್ ಭಟ್ ಕೊಳಚಪ್ಪೆ

ನಮ್ಮ ವೀರರು ನಮ್ಮ ಧೀರರು
ದೇಶ ಕಾಯುವ ಯೋಧರು
ತಾಯ ಸೇವೆಯೆ ಈಶ ಸೇವೆ
ಎನುವ ಭಾರತಿ ಪುತ್ರರು

ಮನೆಯ ಜನರ ಪ್ರೀತಿ ಸರಿಸಿ
ಮನದ ಒಳಗಡೆ ಇರಿಸುತ
ದೇಶಕಾಗಿಯೆ ದೇಹ ತ್ಯಾಗವು
ದೇಶವೇ ಮನೆ ಎನ್ನುತ

ಗಟ್ಟಿ ಮನದಲಿ ದಿಟ್ಟ ಹೆಜ್ಜೆಯು
ಹೆಪ್ಪುಗಟ್ಟುವ ಚಳಿಯಲಿ
ಕುದಿವ ರಕ್ತದಿ ಸೆಟೆದು ಕೋಪದಿ
ಕೋವಿ ಮಚ್ಚಿನ ಸದ್ದಲಿ





ಬೇಲಿ ತಳ್ಳಿ ತಲೆಯ ತೂರುವ
ವೈರಿಗಳ ಸದೆ ಬಡಿಯುತ
ದೇಶಪ್ರೇಮದ ಜ್ವಾಲೆ ಉರಿದು
ಏರಿ ಅವರಲಿ ಸೆಣಸುತ

ಸಾಲುಸಾಲಿನ ಕಣಿವೆ ಇಹುದು
ಹಿಮವು ಮುಚ್ಚಿದ ಬೆಟ್ಟದಿ
ಊಟ ನಿದ್ದೆಯ ಪರಿವೆ ಇಲ್ಲವು
ಹಗಲು ರಾತ್ರೆಯ ದುಡಿತದಿ

ತ್ಯಾಗ ಯೋಗದ ಇವರ ಬದುಕಲಿ
ನಮ್ಮ ಉಸಿರದು ನಿಂತಿದೆ
ತಾಯಿ ನೆಲದಲಿ ಶಾಂತಿ ನೆಲೆಸಲು
ಇವರ ಸೇವೆಯು ಬೇಕಿದೆ

ಇಂಥ ಮಕ್ಕಳ ಪಡೆದ ಪಾವನೆ
ಭಾರತಾಂಬೆಯು ಧನ್ಯಳು
ಕೋಟಿ ಕೋಟಿಯ ನಮನ ನಮ್ಮದು
ಬಾಗಿ ಮುಗಿಯುವ ಕೈಗಳು

## ಚಟುವಟಿಕೆಗಳು

**ಮೇಲೆ ನೀಡಿದ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಪಟ್ಟಿ ಮಾಡಿರಿ.**

## ಕೆಳಗೆ ನೀಡಿರುವ ಆಶಯಗಳಿಗೆ ಸಮಾನವಾದ ಆಶಯವಿರುವ ಪದ್ಯದ ಸಾಲನ್ನು ಹುಡುಕಿ ಬರೆಯಿರಿ.

1. ನಮ್ಮ ಯೋಧರು ಊಟ, ನಿದ್ದೆಯನ್ನು ಬಿಟ್ಟು ಹಗಲು ಮತ್ತು ರಾತ್ರಿ ಎನ್ನದೆ ದೇಶ ಕಾಯುವರು.
2. ಇಂಥ ಮಕ್ಕಳನ್ನು ಪಡೆದ ಭಾರತ ಮಾತೆಗೆ ಕೋಟಿ ಪ್ರಣಾಮಗಳು.

## ಕೆಳಗೆ ನೀಡಿರುವ ಕವಿತೆಯ ಸಾಲುಗಳ ಆಶಯವನ್ನು ಬರೆಯಿರಿ

ಮನೆಯ  ಜನರ ಪ್ರೀತಿ ಸರಿಸಿ
ಮನದ ಒಳಗಡೆ ಇರಿಸುತ
ದೇಶಕಾಗಿಯೆ ದೇಹ ತ್ಯಾಗವು
ದೇಶವೇ ಮನೆ ಎನ್ನುತ

## ಪದ್ಯ ಮುಂದುವರಿಸಿರಿ

ಸುಡು ಬಿಸಿಲೇ ಇರಲಿ
ಭೀಕರ ಮಳೆಯೇ ಬರಲಿ
ಅಂಜದೆ ಅಳುಕದೆ
ಕಾಯುವನು ಗಡಿ ಕಾಯುವನು

..........................................

..........................................

..........................................

..........................................

## ಹೇಳುವ

ನೀವು ದೊಡ್ಡದಾದ ಮೇಲೆ ಸೈನ್ಯಕ್ಕೆ ಸೇರಿದರೆ ದೇಶದ ರಕ್ಷಣೆ ಹೇಗೆ ಮಾಡುವಿರಿ?

**ಈ ಪದ್ಯವನ್ನು ಹಾಡಿ ಅಭಿನಯಿಸಿರಿ**

ನಾನು ಸೈನ್ಯ ಸೇರುವೆ,
ಯೂನಿಫಾರಮ್ ಧರಿಸುವೆ
ಕಾಲಿಗೆ ಬೂಟು ಬಿಗಿಯುವೆ
ನಾನು ಸೈನ್ಯ ಸೇರುವೆ
ನಾನು ಸೈನ್ಯ ಸೇರುವೆ

ತಲೆಗೆ ಟೋಪಿ ಹಾಕುವೆ
ಕೈಯಲ್ಲಿ ಬಂದೂಕು ಹಿಡಿಯುವೆ
ನಾನು ಸೈನ್ಯ ಸೇರುವೆ
ನಾನು ಸೈನ್ಯ ಸೇರುವೆ

ದೇಶದ ರಕ್ಷಣೆ ಮಾಡುವೆ
ವೀರ ಪದಕ ಪಡೆಯುವೆ
ನಾನು ಸೈನ್ಯ ಸೇರುವೆ
ನಾನು ಸೈನ್ಯ ಸೇರುವೆ

(ಸಂಗ್ರಹ)

**ಈ ಪದ್ಯಕ್ಕೆ ಸೂಕ್ತವಾದ ಶೀರ್ಷಿಕೆಯನ್ನು ಬರೆಯಿರಿ.**

## ಕಾರ್ಗಿಲ್ ವಿಜಯ ದಿವಸ್

1999 ರಲ್ಲಿ ಕಾಶ್ಮೀರದ ಲಡಾಕಿನ ಕಾರ್ಗಿಲ್ ಜಿಲ್ಲೆಯ ಕೆಲವು ಪ್ರದೇಶಗಳನ್ನು ಪಾಕಿಸ್ಥಾನದ ಸೇನೆಯು ಆಕ್ರಮಿಸಿತು. ಇದು ಭಾರತ ಮತ್ತು ಪಾಕಿಸ್ಥಾನದ ನಡುವಿನ 'ಕಾರ್ಗಿಲ್ ಯುದ್ಧ'ಕ್ಕೆ ಎಡೆಮಾಡಿಕೊಟ್ಟಿತು. ಯುದ್ದದಲ್ಲಿ ಭಾರತೀಯ ಸೇನೆಯ 527 ಸೈನಿಕರು ದೇಶಕ್ಕಾಗಿ ವೀರ ಮರಣವನ್ನು ಅಪ್ಪಿದರು. ಇವರ ತ್ಯಾಗದ ಫಲವಾಗಿ 1999 ಜುಲಾಯಿ 26 ರಂದು ಕಾರ್ಗಿಲ್ ಯುದ್ದದಲ್ಲಿ ಭಾರತೀಯ ಸೇನೆಯು ವಿಜಯಶಾಲಿಯಾಯಿತು. ಇದರ ನೆನಪಿಗಾಗಿ ಜುಲಾಯಿ 26 ನ್ನು 'ಕಾರ್ಗಿಲ್ ವಿಜಯ ದಿವಸ್' ಎಂದು ಆಚರಿಸಲಾಗುತ್ತದೆ.



# ಕಲಿಕಾ ಕಣಜ



| ವಿಷಯಗಳು | ಚಟುವಟಿಕೆಗಳು |
|---|---|
| ನೋಟ್ ಪುಸ್ತಕ | ಪ್ರವೇಶ ಚಟುವಟಿಕೆ, ಊಹಿಸಿ ಬರೆಯಿರಿ, ಸಾಲು ಹುಡುಕಿ ಬರೆಯಿರಿ, ದಿನಚರಿ, ಪ್ರಾಸ ಪದಗಳು, ಹುಡುಕಿ ಬರೆಯಿರಿ, ಆಶಯ ಬರೆಯಿರಿ, ಪದ್ಯ ಮುಂದುವರಿಸಿರಿ, ಹೇಳುವ, ಶೀರ್ಷಿಕೆ ಬರೆಯಿರಿ. |
| ಪಠ್ಯ ಪುಸ್ತಕ | ಪ್ರವೇಶ ಚಟುವಟಿಕೆ, ವಾಕ್ಯ ರಚಿಸಿರಿ, ಪದ್ಯ ಮುಂದುವರಿಸಿರಿ, ಶೀರ್ಷಿಕೆ ಬರೆಯಿರಿ. |
| ಪೋರ್ಟ್‌ಫೋಲಿಯೊ | ರಚನೆಗಳು |
| ಭಿತ್ತಿಪತ್ರಿಕೆ | ರಚನೆಗಳು |
| ಬಾಲಸಭೆ | ಹಾಡಿ ಅಭಿನಯಿಸಿರಿ |

# 7 ದುಡಿಮೆಯೇ ದೇವರು

ಕಾಯಕವೇ ಕೈಲಾಸ ಎನ್ನುವುದು ರೂಢಿಯಲ್ಲಿರುವ ಗಾದೆಮಾತಾಗಿದೆ. ಜೀವನ ನಿರ್ವಹಣೆಗಾಗಿ, ಸ್ತ್ರೀಪುರುಷರೆಂಬ ಬೇಧವಿಲ್ಲದೆ ಎಲ್ಲರೂ ಒಂದಲ್ಲ ಒಂದು ರೀತಿಯ ಕಸುಬುಗಳನ್ನು ನಿರ್ವಹಿಸುತ್ತಿದ್ದಾರೆ. ಯಾವುದೇ ಕೆಲಸವನ್ನಾದರೂ ನಿಷ್ಠೆಯಿಂದ ನಿರ್ವಹಿಸಬೇಕು. ಆಧುನಿಕ ತಂತ್ರಜ್ಞಾನದ ಪ್ರಭಾವದಿಂದಾಗಿ ಪರಂಪರಾಗತ ಕುಲಕಸುಬುಗಳು ವಿನಾಶದ ಅಂಚಿನಲ್ಲಿವೆ.

**ಚಿತ್ರವನ್ನು ಗಮನಿಸಿ ಇವರು ಯಾರು ಎಂದು ಗುರುತಿಸಿ ಬರೆಯಿರಿ.**











# ಕೆಲಸಗಾರರು

- ವಿ.ಬಿ. ಕುಳಮರ್ವ



ಕಬ್ಬಿಣ ಕುಟ್ಟುತ ಹಾರೆಯ ಕತ್ತಿಯ
ಮಾಡುತ ಕೊಡುವೆನು ರೈತನಿಗೆ
ಬೆಳೆಯನು ಬೆಳೆಯಲು ನೆರವನು ನೀಡುವೆ
ಜನರನು ಸಲಹುವ ದಾತನಿಗೆ



ಮಣ್ಣನು ತುಳಿಯುತ ಹದವನು ಗೈಯುತ
ಚಂದದ ಕೊಡಗಳ ನಿರ್ಮಿಸುವೆ
ರುಚಿ ರುಚಿ ಅಡಿಗೆಗೆ ಮಣ್ಣಿನ ಗಡಿಗೆಯು
ಸಿಹಿ ನೀರಿಗೆ ಹೂಜಿಯ ಕೊಡುವೆ



ಕಾಡನು ಸೇರುತ ಮರವನು ಹುಡುಕುತ
ನೇಗಿಲ ಅಳತೆಗೆ ಕೊಯ್ಯುವೆನು
ಉತ್ತಮ 'ಹಲ' ವನು ಮಾಡುತ ನೊಗವನು
ಕೆತ್ತನೆಯೊಂದಿಗೆ ನೀಡುವೆನು



ಹತ್ತಿಯ ಬೆಳೆಸುತ ನೂಲನು ಮಾಡುತ
ಮೆತ್ತನೆ ಬಟ್ಟೆಯ ನೇಯುವೆನು
ದೇಶದ ಜನರಿಗೆ ವಸನವ ನೀಡುತ
ಎಲ್ಲರ ಮನವನು ಸೆಳೆಯುವೆನು



ಚಿನ್ನವ ಕರಗಿಸಿ ಕುಂದಣವಿಡುತಲಿ
ಮಿರುಗುವ ನಗವನು ಮಾಡುವೆನು
ಹೆಣ್ಣಿನ ಹೃದಯದ ಬಯಕೆಯನರಿಯುತ
ತರ ತರ ಕುಸುರಿಯ ರಚಿಸುವೆನು

## ಚಟುವಟಿಕೆಗಳು

### ಉತ್ತರಿಸಿರಿ

- ಜನರನ್ನು ಸಲಹುವ ದಾತ ಯಾರು?
- ಕುಂಬಾರನು ಮಣ್ಣಿನಿಂದ ತಯಾರಿಸಿದ ವಸ್ತುಗಳು ಯಾವುವು?
- ನೇಕಾರನು ಹೇಗೆ ಬಟ್ಟೆಯನ್ನು ತಯಾರಿಸುತ್ತಾನೆ?

### ಜೋಡಿಸಿರಿ

| | | |
|---|---|---|
| ಕುಂಬಾರ | - | ಕೃಷಿ |
| ಚಮ್ಮಾರ | - | ಚಿನ್ನದ ಆಭರಣ |
| ಅಕ್ಕಸಾಲಿಗ | - | ಬಟ್ಟೆ |
| ರೈತ | - | ಮಡಕೆ |
| ದರ್ಜಿ | - | ಪಾದರಕ್ಷೆ |

### ಚಿತ್ರವನ್ನು ಅವಲೋಕಿಸಿರಿ




### ಚರ್ಚಿಸುವ

- ಎರಡೂ ಚಿತ್ರಗಳಲ್ಲಿ ಕಂಡುಬರುವ ವ್ಯತ್ಯಾಸಗಳೇನು?
- ಈ ಬದಲಾವಣೆಗೆ ಕಾರಣವೇನು?

## ಬರೆಯಿರಿ

ಮಣ್ಣಿನ ಪಾತ್ರೆಗಳ ಬಳಕೆಯಲ್ಲಿ ಉಂಟಾದ ಬದಲಾವಣೆಗಳು ಮತ್ತು ಕಾರಣಗಳನ್ನು ಟಿಪ್ಪಣಿಯಾಗಿ ಬರೆಯಿರಿ.

## ಅಡಗಿರುವ ಗಾದೆ ಮಾತುಗಳನ್ನು ಹುಡುಕಿ ಬರೆಯಿರಿ

ಅರಸನಾಗಿ, ಕೆಸರಾದರೆ, ಕುಡಿಕೆ, ರೊಟ್ಟಿ,
ಆಳಾಗಿ, ಬಾಯಿ, ಅನ್ನ, ಕೂತು, ಕೈ, ಮೊಸರು,
ರಟ್ಟೆ, ದುಡಿ, ಉಣ್ಣುವವನಿಗೆ, ತಿನ್ನಬೇಕು,
ಸಾಲದು, ಉಣ್ಣು, ಮುರಿಯಬೇಕು, ಹೊನ್ನು.

- ಕೈ ಕೆಸರಾದರೆ ಬಾಯಿ ಮೊಸರು
- ........................................
- ........................................
- ........................................

## ಒಗಟು ಪದ್ಯದ ಉತ್ತರಗಳನ್ನು ಬರೆಯಿರಿ

1. ಕಬ್ಬಿಣ ಬಡಿದು
ಒಲೆಯಲಿ ಕಾಯಿಸಿ
ಕತ್ತಿ, ಹಾರೆಯ ಮಾಡುವೆನು
ನಾನ್ಯಾರು? [ ]

2. ದವಸ ಧಾನ್ಯ ಬೆಳೆಯುವೆ
ಜಗಕೆ ಅನ್ನ ನೀಡುವೆ
ಜನರ ಹಸಿವ ನೀಗುವೆ
ನಾನ್ಯಾರು? [ ]

ಮೇಲಿನ ಮಾದರಿಯಂತೆ ಒಗಟು ಪದ್ಯಗಳನ್ನು ರಚಿಸಿರಿ.

# ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

ಪರ್ವತಪುರ ಎಂಬ ರಾಜ್ಯದ ರಾಜನ ಬಳಿ ಹಲವಾರು ಕುದುರೆಗಳಿದ್ದುವು. ಅವುಗಳಲ್ಲಿ ಅಶ್ವಜ ಎಂಬ ಕುದುರೆಯೂ ಒಂದಾಗಿತ್ತು. ರಾಜನು ತನ್ನ ಸವಾರಿಗಾಗಿ ಆ ಕುದುರೆಯನ್ನೇ ಉಪಯೋಗಿಸುತ್ತಿದ್ದನು. ಅದು ರಾಜನ ಕುದುರೆಯಾದುದರಿಂದ ಸ್ಥಾನ-ಮಾನಗಳ ಜೊತೆಯಲ್ಲಿ ಉತ್ತಮ ಆಹಾರವೂ ಲಭಿಸುತ್ತಿತ್ತು. ಆದರೆ ಯುದ್ಧದ ಹೆಸರು ಕೇಳಿದರೆ ಅದು ಭಯದಿಂದ ನಡುಗುತ್ತಿತ್ತು. ಆ ರಾಜ್ಯದಲ್ಲಿ ಒಬ್ಬ ಕುದುರೆಗಾಡಿಯವನಲ್ಲಿಯೂ ಒಂದು ಕುದುರೆಯಿತ್ತು. ಅದರ ಹೆಸರು ತೇಜ. ಪ್ರತಿದಿನ ಬೆಳಗ್ಗಿನಿಂದ ಸಂಜೆಯವರೆಗೆ ಗಾಡಿ ಎಳೆದೂ ಎಳೆದೂ ಕಷ್ಟಪಡುತ್ತಿತ್ತು. ವಿಶ್ರಮವಿಲ್ಲದೆ, ಸರಿಯಾದ ಆಹಾರವಿಲ್ಲದೆ ಅದು ಸೊರಗಿ ಹೋಗಿತ್ತು.

ಅಶ್ವಜ ಮತ್ತು ತೇಜ ಕೆಲವೊಮ್ಮೆ ಪ್ರಯಾಣದ ವೇಳೆಯಲ್ಲಿ ನಗರದ ಬೀದಿಗಳಲ್ಲಿ ಪರಸ್ಪರ ಕಾಣುತ್ತಿದ್ದವು. ಆಗ ಅಶ್ವಜವು ಮನಸ್ಸಿನಲ್ಲಿ "ನಾನು ಈ ಗಾಡಿಯ ಕುದುರೆಯಾಗುತ್ತಿದ್ದರೆ ಯುದ್ಧ ಮಾಡಬೇಕಾಗಿರುತ್ತಿರಲಿಲ್ಲ" ಎಂದು ಚಿಂತಿಸುತ್ತಿತ್ತು.



ಅದೇ ರೀತಿ ತೇಜವು "ನಾನು ಈ ರಾಜನ ಕುದುರೆಯಾಗುತ್ತಿದ್ದರೆ ಹೊತ್ತು ಹೊತ್ತಿಗೆ ಉತ್ತಮವಾದ ಆಹಾರ ಸಿಗುತ್ತಿತ್ತು. ವಿಶ್ರಮವೂ, ಸ್ಥಾನಮಾನಗಳೂ ಲಭಿಸುತ್ತಿದ್ದುವು" ಎಂದು ಮನಸ್ಸಿನಲ್ಲಿಯೇ ಮರುಕಪಡುತ್ತಿತ್ತು.

ಹೀಗಿರಲು ನೆರೆರಾಜ್ಯದ ರಾಜನು ಪರ್ವತಪುರ ರಾಜ್ಯದೊಂದಿಗೆ ಯುದ್ಧಕ್ಕೆ ಬರುವುದಾಗಿ ಸುದ್ದಿ ತಲುಪಿತು. ರಾಜನು ಸೈನ್ಯವನ್ನು ಸಜ್ಜುಗೊಳಿಸಲು ಆದೇಶಿಸಿದನು. ಸೈನಿಕರು ಶಸ್ತ್ರಾಸ್ತ್ರಗಳನ್ನು ಸಿದ್ಧಗೊಳಿಸಿದರು. ಅಶ್ವಜನಿಗೆ ಯುದ್ಧದ ಮುನ್ಸೂಚನೆ ಲಭಿಸಿತು. ಇನ್ನು ನಾನು ಇಲ್ಲಿದ್ದರೆ ನನಗೆ ಉಳಿಗಾಲವಿಲ್ಲ ಎಂದು ಭಯದಿಂದ ನಡುಗಿತು. ಯುದ್ಧಕ್ಕೆ ಹೋದರೆ ತಾನು ಸಾಯುವುದು ಖಂಡಿತ. ಯುದ್ಧದಿಂದ ತಪ್ಪಿಸಿಕೊಳ್ಳಲು ತಾನೇನು ಮಾಡಲಿ ಎಂದು ಆಲೋಚಿಸಿತು. ಅದಕ್ಕೊಂದು ತಂತ್ರ ಹೊಳೆಯಿತು. ಅದು ಕೂಡಲೇ ಲಾಯದಿಂದ ತಪ್ಪಿಸಿಕೊಂಡು ಹೋಗಿ ತೇಜನನ್ನು ಭೇಟಿಯಾಯಿತು. ರಾಜನ ಕುದುರೆಯು ತನ್ನನ್ನು ಕಾಣಲು ಬಂದಿರುವುದನ್ನು ಕಂಡು ತೇಜನಿಗೆ ಬಹಳ ಸಂತೋಷವಾಯಿತು. "ಗೆಳೆಯ, ನೀನು ಕಷ್ಟಪಟ್ಟು ದುಡಿಯುತ್ತಿರುವುದನ್ನು ಕಾಣುತ್ತಿದ್ದೇನೆ. ನಿನಗೆ ಸಹಾಯ ಮಾಡುವುದಕ್ಕೆ ಬಂದಿದ್ದೇನೆ. ನಾನು ಇನ್ನು ಮುಂದೆ ನಿನ್ನ ಗಾಡಿಯನ್ನು ಎಳೆಯುತ್ತೇನೆ. ನೀನು ಅರಮನೆಯಲ್ಲಿ ನನ್ನ ಕೆಲಸ ಮಾಡು" ಎಂದು ಅಶ್ವಜ ಹೇಳಿತು. ಅದಕ್ಕೆ ತೇಜ ಒಪ್ಪಿಕೊಂಡಿತು. ಅದು ಅರಮನೆಗೆ ಹೋಯಿತು.

ತಾನು ಬರಲಿರುವ ಯುದ್ಧದಿಂದ ತಪ್ಪಿಸಿಕೊಂಡೆನೆಂದು ಅಶ್ವಜ ಹಿಗ್ಗಿತು. ದಿನಗಳು ಕಳೆದುವು. ರಾಜನ ಕುದುರೆ ನಗರದಲ್ಲಿ ಗಾಡಿ ಎಳೆದೂ ಎಳೆದೂ ಕಂಗಾಲಾಯಿತು. 'ನನಗೆ ಅರಮನೆಯ ಕೆಲಸವೇ ಸಾಕು' ಎಂದುಕೊಂಡು ಗಾಡಿಯವನಿಂದ ತಪ್ಪಿಸಿಕೊಂಡು ಅರಮನೆಗೆ ಓಡಿತು. ಅದನ್ನು ಕಂಡಾಗ ತೇಜನಿಗೆ ಬಹಳ ಸಂತೋಷವಾಯಿತು. "ಗೆಳೆಯಾ, ನನಗೆ ನನ್ನ ಕೆಲಸವೇ ಆದೀತು. ಯುದ್ಧ ಮಾಡಲು ನನ್ನಿಂದಾಗದು" ಎಂದಿತು ತೇಜ. "ನನಗೂ ನನ್ನ ಕೆಲಸವೇ ಸಾಕು. ದಿನವಿಡೀ ಗಾಡಿ ಎಳೆಯುವುದಕ್ಕೆ ನನ್ನಿಂದ ಆಗದು" ಎಂದಿತು ಅಶ್ವಜ. ಎಲ್ಲಾ ಕೆಲಸಗಳಿಗೆ ಅದರದ್ದೇ ಆದ ಪ್ರಾಧಾನ್ಯವಿದೆ ಎಂದು ಅವುಗಳು ತಿಳಿದುಕೊಂಡವು.

## ಚಟುವಟಿಕೆಗಳು

### ಕೆಳಗಿನ ಪದಗಳನ್ನು ವಿಂಗಡಿಸಿ ಬರೆಯಿರಿ

ಕುದುರೆಗಳಿದ್ದುವು -

ಕೆಲವೊಮ್ಮೆ -

ಕಾಣುತ್ತಿದ್ದುವು -

ಅದಕ್ಕೊಂದು -

ಕಂಗಾಲಾಯಿತು -

### ಘಟನೆಗಳನ್ನು ಕ್ರಮೀಕರಿಸಿ ಬರೆಯಿರಿ

- ಅಶ್ವಜ ಗಾಡಿಯವನಿಂದ ತಪ್ಪಿಸಿಕೊಂಡು ಅರಮನೆಗೆ ಓಡಿತು.
- ಅಶ್ವಜ ಮತ್ತು ತೇಜ ಕೆಲವೊಮ್ಮೆ ಪ್ರಯಾಣದ ವೇಳೆಯಲ್ಲಿ ನಗರದ ಬೀದಿಗಳಲ್ಲಿ ಪರಸ್ಪರ ಕಾಣುತ್ತಿದ್ದವು.
- ಅಶ್ವಜ ಲಾಯದಿಂದ ತಪ್ಪಿಸಿಕೊಂಡು ಓಡಿತು.
- ತೇಜ ಬೆಳಗ್ಗಿನಿಂದ ಸಂಜೆಯವರೆಗೆ ಗಾಡಿ ಎಳೆದೂ ಎಳೆದೂ ಕಷ್ಟಪಡುತ್ತಿತ್ತು.
- ಅಶ್ವಜನಿಗೆ ಯುದ್ಧದ ಮುನ್ಸೂಚನೆ ಲಭಿಸಿತು.

### ಸಮಾನ ಅರ್ಥ ಬರುವ ಪದಗಳನ್ನು ಪಾಠಭಾಗದಿಂದ ಹುಡುಕಿ ಬರೆಯಿರಿ.

1. ಆನಂದ -
2. ಅರಸ -
3. ಕದನ -
4. ಹಯ -
5. ಹೆದರಿಕೆ -

## ಕೆಳಗಿನ ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿರಿ

**ಮಾದರಿ :**

- ಪರಸ್ಪರ - ಮನೆಗೆಲಸಗಳಲ್ಲಿ ಎಲ್ಲರೂ ಪರಸ್ಪರ ಸಹಕರಿಸಬೇಕು.

1. ಆಹಾರ - ..........................................................................................
2. ಸುದ್ದಿ - ..........................................................................................
3. ವಿಶ್ರಮ - ..........................................................................................

## ಅಭಿಪ್ರಾಯಗಳನ್ನು ಬರೆಯಿರಿ

"ಗೆಳೆಯಾ, ನನಗೆ ನನ್ನ ಕೆಲಸವೇ ಸಾಕು. ಯುದ್ಧ ಮಾಡಲು ನನ್ನಿಂದಾಗದು" ಎಂದಿತು ತೇಜ.

"ನನಗೂ ನನ್ನ ಕೆಲಸವೇ ಸಾಕು. ದಿನವಿಡೀ ಗಾಡಿ ಎಳೆಯುವುದಕ್ಕೆ ನನ್ನಿಂದ ಆಗದು" ಎಂದಿತು ಅಶ್ವಜ.

ಈ ಮೇಲಿನ ಮಾತುಗಳ ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

**ಕಾರ್ಮಿಕರ ದಿನ (ಮೇ ಡೇ)**

ಕಾರ್ಮಿಕರ ಸಾಂವಿಧಾನಿಕ ಹಕ್ಕುಗಳನ್ನು ಎತ್ತಿ ಹಿಡಿಯಲು ಮತ್ತು ಸಮಾಜದ ಅಭಿವೃದ್ಧಿಗೆ ಕಾರ್ಮಿಕರು ನೀಡಿದ ಕೊಡುಗೆಗಳನ್ನು ನೆನಪಿಸುವ ಸಲುವಾಗಿ ಪ್ರತೀ ವರ್ಷ ಮೇ 1 ರಂದು ಅಂತಾರಾಷ್ಟ್ರೀಯ ಕಾರ್ಮಿಕರ ದಿನವನ್ನಾಗಿ ಆಚರಿಸಲಾಗುವುದು.



# ಕಲಿಕಾ ಕಣಜ



| ವಿಷಯಗಳು | ಚಟುವಟಿಕೆಗಳು |
|---|---|
| ನೋಟ್ ಪುಸ್ತಕ | ಪ್ರವೇಶ ಚಟುವಟಿಕೆ, ಉತ್ತರಿಸಿರಿ, ಜೋಡಿಸಿರಿ, ಚಿತ್ರ ಅವಲೋಕನ, ಗಾದೆ ಮಾತು ಹುಡುಕಿರಿ, ಒಗಟು ಪದ್ಯ, ಪದ ವಿಂಗಡನೆ, ಕ್ರಮೀಕರಿಸಿ ಬರೆಯಿರಿ, ಸಮಾನಾರ್ಥ ಪದ, ವಾಕ್ಯ ರಚಿಸಿರಿ, ಅಭಿಪ್ರಾಯ ಟಿಪ್ಪಣಿ. |
| ಪಠ್ಯ ಪುಸ್ತಕ | ಪ್ರವೇಶ ಚಟುವಟಿಕೆ, ಜೋಡಿಸಿರಿ, ಗಾದೆ ಮಾತು ಹುಡುಕಿರಿ, ಪದ ವಿಂಗಡನೆ, ಸಮಾನಾರ್ಥ ಪದ, ವಾಕ್ಯ ರಚಿಸಿರಿ. |
| ಪೋರ್ಟ್ ಫೋಲಿಯೊ | ರಚನೆಗಳು |
| ಭಿತ್ತಿಪತ್ರಿಕೆ | ರಚನೆಗಳು |
| ಬಾಲಸಭೆ | ಪದ್ಯ ಹಾಡುವುದು |

# 8 ಕಾಲಗಳೇ ಮುನಿಯದಿರಿ

ಬದಲಾವಣೆಯು ಪ್ರಕೃತಿಯ ನಿಯಮವಾಗಿದೆ. ಅದರೊಂದಿಗೆ ಬದುಕು ಸಾಗಿಸುವುದು ಅನಿವಾರ್ಯ. ಹವಾಮಾನಕ್ಕನುಗುಣವಾದ ಉಡುಗೆ, ತೊಡುಗೆ, ಆಹಾರ ಕ್ರಮಗಳಲ್ಲೂ ಬದಲಾವಣೆಯು ಅಗತ್ಯವಾಗಿದೆ. ಜೀವಜಾಲಗಳ ಜೀವನದಲ್ಲೂ ಪ್ರಕೃತಿಯ ಆಗುಹೋಗುಗಳು ಪರಿಣಾಮ ಬೀರುವುದು. ಪ್ರಾಕೃತಿಕ ಸಮತೋಲನವನ್ನು ಕಾಪಾಡುವಲ್ಲಿ ಪರಿಸರ ಸೌಹಾರ್ದಯುತವಾದ ಜೀವನ ಶೈಲಿಯನ್ನು ಅಳವಡಿಸಿಕೊಂಡು ಪರಿಸರ ಸಂರಕ್ಷಣೆಗಾಗಿ ಕೈಜೋಡಿಸೋಣ.

**ಚಿತ್ರಗಳನ್ನು ನೋಡಿ, ಕಾಲವನ್ನು ಬರೆಯಿರಿ**







# ಯಾವುದು ಇಷ್ಟ?



ಗುರುಗಳು : ಹೇಳೇ ಗಂಗಾ, ಹೇಳೇ ಗಂಗಾ
ಯಾವ ಕಾಲವು ಇಷ್ಟ?
ನಿನಗೆ ಯಾವ ಕಾಲವು ಇಷ್ಟ?

ಗಂಗಾ : ದಿನವಿಡಿ ಆಡಲು ನೀರನು ಸುರಿಸುವ
ಪೇಟೆಗೆ ಹೋಗಲು ಕೊಡೆಯನು ಹಿಡಿಸುವ
ಮಳೆಗಾಲವೆ ಇಷ್ಟ
ನನಗೆ ಮಳೆಗಾಲವೆ ಇಷ್ಟ

ಗುರುಗಳು : ಹೇಳೇ ತುಂಗಾ, ಹೇಳೇ ತುಂಗಾ
ಯಾವ ಕಾಲವು ಇಷ್ಟ?
ನಿನಗೆ ಯಾವ ಕಾಲವು ಇಷ್ಟ?

ತುಂಗಾ : ಬೆಚ್ಚನೆ ಬಟ್ಟೆಯ ತೊಡಿಸಲು ಬರುವ
ಬಿಸಿ ಬಿಸಿ ತಿಂಡಿಯ ತಿನ್ನಲು ತರುವ
ಚಳಿಗಾಲವೆ ಇಷ್ಟ
ನನಗೆ ಚಳಿಗಾಲವೆ ಇಷ್ಟ

ಗುರುಗಳು : ಹೇಳೋ ರಂಗಾ ಹೇಳೋ ರಂಗಾ
ಯಾವ ಕಾಲವು ಇಷ್ಟ?
ನಿನಗೆ ಯಾವ ಕಾಲವು ಇಷ್ಟ?

ರಂಗ : ನೇರಳೆ, ಮಾವು, ಹಲಸನು ಕೊಡುವ
ಆಟಕೆ ನಮಗೆ ಬಿಡುವನು ತರುವ
ಬೇಸಿಗೆ ಕಾಲವೆ ಇಷ್ಟ
ನನಗೆ ಬೇಸಿಗೆ ಕಾಲವೆ ಇಷ್ಟ

ಮಕ್ಕಳು : ಹೇಳಿರಿ ಗುರುಗಳೆ, ಹೇಳಿರಿ ಗುರುಗಳೆ
ಯಾವ ಕಾಲವು ಇಷ್ಟ?
ನಿಮಗೆ ಯಾವ ಕಾಲವು ಇಷ್ಟ?

ಗುರುಗಳು : ಆಟಕೆ ಊಟಕೆ ನೀರನು ಕೊಡುವ
ಬೆಚ್ಚನೆ ಉಡುಗೆ ತೊಡಿಸಲು ಬರುವ
ತಿನ್ನಲು ಸವಿ ಸವಿ ಹಣ್ಣನು ತರುವ
ಮೂರೂ ಕಾಲಗಳಿಷ್ಟ
ನನಗೆ ಮೂರು ಕಾಲಗಳಿಷ್ಟ

(ಸಂಗ್ರಹ)

## ಚಟುವಟಿಕೆಗಳು

**ಪದ್ಯವನ್ನು ರಾಗವಾಗಿ ಹಾಡಿರಿ.**

**ಈ ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಪಟ್ಟಿ ಮಾಡಿರಿ.**

.................................. ..........................................

.................................. ..........................................

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

- ಗಂಗಾಳಿಗೆ ಇಷ್ಟವಾದ ಕಾಲ ಯಾವುದು? ಇಷ್ಟವಾಗಲು ಕಾರಣವೇನು?
- ಗುರುಗಳಿಗೆ ಮೂರೂ ಕಾಲಗಳು ಇಷ್ಟವಾಗಲು ಕಾರಣವೇನು?
- ನಿಮಗೆ ಇಷ್ಟವಾದ ಕಾಲ ಯಾವುದು? ಯಾಕೆ?

## ಪದ್ಯದ ಸಾಲುಗಳನ್ನು ಗದ್ಯರೂಪಕ್ಕೆ ಬದಲಾಯಿಸಿ ಬರೆಯಿರಿ

**ಮಾದರಿ :**

ಪೇಟೆಗೆ ಹೋಗಲು ಕೊಡೆಯನು ಹಿಡಿಸುವ ಮಳೆಗಾಲವೇ ಇಷ್ಟ

ಪೇಟೆಗೆ ಹೋಗುವಾಗ ಕೊಡೆಯನ್ನು ಹಿಡಿಯುವಂತೆ ಮಾಡುವ ಮಳೆಗಾಲವು ಇಷ್ಟ.

ಬಿಸಿ ಬಿಸಿ ತಿಂಡಿಯ ತಿನ್ನಲು ತರುವ ಚಳಿಗಾಲವೆ ಇಷ್ಟ

..........................................................................................................

ಆಟಕೆ ನಮಗೆ ಬಿಡುವನು ತರುವ ಬೇಸಗೆ ಕಾಲವೆ ಇಷ್ಟ

..........................................................................................................

ಹೇಳಿರಿ ಗುರುಗಳೆ ನಿಮಗೆ ಯಾವ ಕಾಲವು ಇಷ್ಟ

..........................................................................................................

## ಸಾಲುಗಳನ್ನು ಸೇರಿಸಿರಿ

ಬಂದಿತು ಮಳೆಯು

ನಲಿಯಿತು ಇಳೆಯು

ತಕ ದಿಮಿ ತಕ ದಿಮಿ ತಾ

ಬಂದಿತು ಚಳಿಯು

…………………………….…

…………………………….…

ಬಂದಿತು ಸೆಕೆಯು

………………………………………

………………………………………..

## ಬರೆಯಿರಿ

ಅಕ್ಟೋಬರ್ ತಿಂಗಳ ನಂತರ ಚಳಿಗಾಲ ಆರಂಭವಾಗುವುದು. ಮುಂಜಾವಿನಲ್ಲಿ ಇಬ್ಬನಿ ತಬ್ಬಿದ ವಾತಾವರಣವು ಮನಸ್ಸಿಗೆ ಮುದ ನೀಡುವುದು. ಹಕ್ಕಿಗಳ ಚಿಲಿಪಿಲಿ ಗಾನ ಮೈಕೊರೆಯುವ ಚಳಿ ಅರಳಿರುವ ಬಣ್ಣ ಬಣ್ಣದ ಹೂಗಳ ಕಂಪು. ಆಹಾ! ಎಷ್ಟೊಂದು ಸುಂದರವಾದ ಅನುಭವ. ಪ್ರಕೃತಿಯ ಬದಲಾವಣೆಯನ್ನು ವರ್ಣಿಸಲು ಅಸಾಧ್ಯ. ಕಂಬಳಿ ಹೊದ್ದು ಮಲಗಿದರೆ ಏಳಬೇಕೆಂದೇ ತೋರುವುದಿಲ್ಲ.

**ಚಳಿಗಾಲದ ಕುರಿತು ಬರೆದಿರುವುದನ್ನು ಓದಿದಿರಲ್ಲವೇ. ಕೆಳಗೆ ನೀಡಿದ ಪದಸೂರ್ಯವನ್ನು ಪೂರ್ತಿಗೊಳಿಸಿ ಬೇಸಿಗೆ ಕಾಲದ ಕುರಿತು ಬರೆಯಿರಿ.**



# ತಾಳ್ಮೆಯ ಫಲ



ಒಮ್ಮೆ ಊರಿಗೆ ಭೀಕರ ಬರಗಾಲ ಬಂದಿತು. ಜನರು ಕಂಗಾಲಾದರು. ಜಾನುವಾರುಗಳು ಮೇವು, ನೀರು ಇಲ್ಲದೆ ಸೊರಗಿದವು. ಅದೇ ಊರಿನಲ್ಲಿದ್ದ ಶ್ರೀಮಂತ ಧನಪತಿರಾಯ ಕರುಣಾಳು ಆಗಿದ್ದನು. ಜನರ ಕಷ್ಟವನ್ನು ಅವನಿಂದ ನೋಡಲಾಗಲಿಲ್ಲ. ಊರಿನ ಕಡುಬಡವರಾದ ಮಕ್ಕಳಿಗೆ ದಿನವೂ ರೊಟ್ಟಿಗಳನ್ನು ಕೊಡುವುದಾಗಿ ಹೇಳಿದನು. ಇದರಿಂದ ಜನರಿಗೆ ಸಂತೋಷವಾಯಿತು.

ಧನಪತಿರಾಯ ತನ್ನ ಮಾತಿನಂತೆ ಮರುದಿನ ಬೆಳಗ್ಗೆ ಒಂದು ಬುಟ್ಟಿಯಲ್ಲಿ ತುಂಬಾ ರೊಟ್ಟಿಗಳನ್ನು ಶಾಲೆಯ ಜಗಲಿಯ ಮೇಲೆ ತಂದಿಟ್ಟನು. ಮಕ್ಕಳು ಆಗಲೇ ಅಲ್ಲಿ ಬಂದು ಸೇರಿದ್ದರು. ಅವರು ರೊಟ್ಟಿಗಳನ್ನು ಕಂಡು ಒಮ್ಮೆಲೇ ನುಗ್ಗಿದರು.

ಒಬ್ಬರ ಮೇಲೊಬ್ಬರು ಬಿದ್ದರು, ತಳ್ಳಾಡಿದರು, ಸ್ವಲ್ಪ ದೊಡ್ಡದಾಗಿರುವ ರೊಟ್ಟಿಯನ್ನುಪಡೆಯುವುದುಅವರಉದ್ದೇಶವಾಗಿತ್ತು.ಸ್ವಲ್ಪದೂರದಲ್ಲಿ ಪುಟ್ಟ ಹುಡುಗಿ ನೀಲಮ್ಮ ಇದನ್ನು ನೋಡುತ್ತಾ ಸುಮ್ಮನೆ ನಿಂತಿದ್ದಳು. ಗುಂಪು ಕರಗಿದ ಮೇಲೆ ನೀಲಮ್ಮ ನಿಧಾನವಾಗಿ ಬಂದು ಬುಟ್ಟಿಯಲ್ಲಿ ಉಳಿದಿದ್ದ ಒಂದು ರೊಟ್ಟಿಯನ್ನು ಎತ್ತಿಕೊಂಡಳು. ಸಂತೋಷದಿಂದ ಶ್ರೀಮಂತನ ಬಳಿ ಬಂದಳು. ಅವನಿಗೆ ಕೃತಜ್ಞತೆ ಹೇಳಿದಳು. ಇದರಿಂದ ಶ್ರೀಮಂತನಿಗೆ ತುಂಬ ಸಂತೋಷವಾಯಿತು. ಬೇರೆ ಮಕ್ಕಳು ರೊಟ್ಟಿಯನ್ನು ತೆಗೆದುಕೊಂಡು ಅಲ್ಲಿಂದ ಓಡಿದ್ದರು. ಶ್ರೀಮಂತನಿಗೆ ಕೃತಜ್ಞತೆಯನ್ನು ಹೇಳುವಷ್ಟು ವ್ಯವಧಾನವಾಗಲೀ, ಸಂಯಮವಾಗಲೀ ಅವರಲ್ಲಿ ಇರಲಿಲ್ಲ.



ಮುಂದಿನ ಎರಡು ದಿನವೂ ಇದೇ ಸ್ಥಿತಿಯಾಯಿತು. ಮೂರನೆಯ ದಿನ ನೀಲಮ್ಮ ಕೊನೆಯಲ್ಲಿ ಉಳಿದ ಒಂದು ಸಣ್ಣ ರೊಟ್ಟಿಯನ್ನು ಮನೆಗೆ ತಂದಳು. ತಾಯಿಯೊಡನೆ ಅದನ್ನು ಹಂಚಿಕೊಳ್ಳಲು ಎರಡು ತುಂಡು ಮಾಡಿದಳು. ಆಶ್ಚರ್ಯ! ಅದರಿಂದ ಒಂದು ಚಿನ್ನದ ನಾಣ್ಯ ಕೆಳಗೆ ಬಿತ್ತು. ತಾಯಿ-ಮಗಳು ಅದನ್ನು ಕಂಡು ಹೌಹಾರಿದರು. ರೊಟ್ಟಿ ಮಾಡುವಾಗ ಅಪ್ಪಿ ತಪ್ಪಿ ಬಿದ್ದಿರಬಹುದು ಎಂದು ಯೋಚಿಸಿದರು. ನೀಲಮ್ಮ ತಡಮಾಡದೆ ಶ್ರೀಮಂತನ ಬಳಿಗೆ ಬಂದಳು.

"ಬಾಬೂಜಿ! ನೀವು ಕೊಟ್ಟ ರೊಟ್ಟಿಯಲ್ಲಿ ಈ ಚಿನ್ನದ ನಾಣ್ಯ ಇತ್ತು. ಅಕಸ್ಮಾತ್ ಇದು ರೊಟ್ಟಿಯೊಳಗೆ ಬಂದಿರಬಹುದು. ತೆಗೆದುಕೊಳ್ಳಿ" ಎಂದು ಚಿನ್ನದ ನಾಣ್ಯವನ್ನು ಅವನ ಮುಂದಿಟ್ಟಳು.



ಶ್ರೀಮಂತನಿಗೆ ಹುಡುಗಿಯ ಪ್ರಾಮಾಣಿಕತೆಯನ್ನು ಕಂಡು ತುಂಬ ಸಂತೋಷವಾಯಿತು. “ಮಗು! ಇದು ಆಕಸ್ಮಿಕ ಅಲ್ಲ, ನಿನ್ನ ಸಹನೆ ಹಾಗೂ ಕೃತಜ್ಞತೆಗೆ ನಾನು ಮಾರುಹೋಗಿದ್ದೇನೆ. ಇತರ ಮಕ್ಕಳು ರೊಟ್ಟಿಯನ್ನು ಪಡೆಯಲು ದಿನವೂ ಮುಗಿ ಬೀಳುತ್ತಿದ್ದರು. ನೀನು ಮಾತ್ರ ತಾಳ್ಮೆಯಿಂದ ನಿಂತು ಕೊನೆಯ ರೊಟ್ಟಿಯನ್ನು ತೆಗೆದುಕೊಂಡು ಹೋಗುತ್ತಿದ್ದೆ. ನನಗೆ ಕೃತಜ್ಞತೆ ಹೇಳಿ ನಗುನಗುತ್ತಾ ಹೋಗುವುದನ್ನು ಕಂಡು ನನಗೆ ಮೆಚ್ಚುಗೆಯಾಯಿತು. ನಿನ್ನ ಸಂಯಮ, ಕೃತಜ್ಞತಾ ಮನೋಭಾವವನ್ನು ಕಂಡು ನಾನೇ ನೇರವಾಗಿ ಈ ಚಿನ್ನದ ನಾಣ್ಯವನ್ನು ಇದರಲ್ಲಿ ಇಟ್ಟಿದ್ದೆ. ಇದನ್ನು ನೀನೇ ತೆಗೆದುಕೋ" ಎಂದು ಹೇಳಿ ಪ್ರೀತಿಯಿಂದ ಹುಡುಗಿಯ ತಲೆ ನೇವರಿಸಿದನು.

(ಸಂಗ್ರಹ)

## ಚಟುವಟಿಕೆಗಳು

**ಈ ಪದಗಳನ್ನು ಸರಿಪಡಿಸಿ ಬರೆಯಿರಿ**

ಜನುವಾರುಗಳು - ........................................

ಸಂತುಷವಾಯಿತು - ........................................

ಆಸಪಟ್ಟರು - ........................................

ವವಧಾನ - ........................................

ಹಾಹಾರಿದರು - ........................................

## ಉತ್ತರಿಸಿರಿ

1. ಭೀಕರ ಬರದಿಂದ ಕಂಗಾಲಾದ ಜನರಿಗೆ ಧನಪತಿರಾಯನು ಹೇಗೆ ಸಹಾಯ ಮಾಡಿದನು?
2. ನೀಲಮ್ಮಳು ತಡಮಾಡದೆ ಶ್ರೀಮಂತನ ಬಳಿಗೆ ಹೋದದ್ದು ಯಾಕೆ?
3. ಧನಪತಿರಾಯನಿಗೆ ನೀಲಮ್ಮನ ಯಾವೆಲ್ಲಾ ಗುಣಗಳು ಮೆಚ್ಚುಗೆಯಾಯಿತು?
4. ನೀಲಮ್ಮನ ಪ್ರಾಮಾಣಿಕತೆಗೆ ಮೆಚ್ಚಿ ಧನಪತಿರಾಯನು ಏನು ಹೇಳಿದನು?

## ವಾಕ್ಯಗಳನ್ನು ಪಾಠದಲ್ಲಿ ಇರುವಂತೆ ಪೂರ್ತಿಗೊಳಿಸಿರಿ

1. ಒಮ್ಮೆ ಊರಿಗೆ ಭೀಕರ ...................... ಬಂದಿತು.
2. ನೀಲಮ್ಮಳು ಸಂತೋಷದಿಂದ ಶ್ರೀಮಂತನ ಬಳಿ ಬಂದು ....... ಹೇಳಿದಳು.
3. ...................! ಅದರಿಂದ ಒಂದು ಚಿನ್ನದ ನಾಣ್ಯ ಕೆಳಗೆ ಬಿತ್ತು.
4. “ಬಾಬೂಜಿ! ನೀವು ಕೊಟ್ಟ ರೊಟ್ಟಿಯಲ್ಲಿ ಈ ಚಿನ್ನದ ನಾಣ್ಯ ಇತ್ತು. ................... ಇದು ರೊಟ್ಟಿಯೊಳಗೆ ಬಂದಿರಬಹುದು.

## ಬರೆಯಿರಿ

ಧನಪತಿರಾಯನಿಗೆ ನೀಲಮ್ಮನ ಪ್ರಾಮಾಣಿಕತೆಯನ್ನು ಕಂಡು ತುಂಬ ಸಂತೋಷವಾಯಿತು. ಅವನು ತನ್ನ ಮನೆಯಲ್ಲಿ ಕುಳಿತುಕೊಂಡು ನಡೆದ ಘಟನೆಗಳನ್ನೆಲ್ಲ ಮತ್ತೊಮ್ಮೆ ಮೆಲುಕುಹಾಕತೊಡಗಿದನು. ಅವನ ಮನಸ್ಸಿನಲ್ಲಿ ಒಂದು ಯೋಚನೆ ಮೂಡಿತು. ‘ನನ್ನ ಊರಿನಲ್ಲಿ ಉಂಟಾದ ಭೀಕರ ಬರಗಾಲದಿಂದಾಗಿ ಜಾನುವಾರುಗಳು ಮೇವು, ನೀರು ಇಲ್ಲದೆ ಸೊರಗಿ ಹೋಗಿವೆ. ಜನರು ಜೀವನ ಸಾಗಿಸಲು ಕಷ್ಟಪಡುತ್ತಿದ್ದಾರೆ. ಈ ಊರನ್ನು ಬರಗಾಲದಿಂದ ಪಾರು ಮಾಡುವುದು ಹೇಗೆ?’ ಎಂದು ಯೋಚಿಸಿದನು.

ತನ್ನ ಊರನ್ನು ಬರಗಾಲದಿಂದ ಪಾರುಮಾಡುವುದರ ಕುರಿತು ಧನಪತಿರಾಯನ ಮನಸ್ಸಿನಲ್ಲಿ ಕೆಲವೊಂದು ವಿಚಾರಗಳು ಮೂಡಿದವು. ಅವುಗಳು ಏನಾಗಿರಬಹುದು? ಊಹಿಸಿ ಬರೆಯಿರಿ.

..................................................................................................................

..................................................................................................................

..................................................................................................................

..................................................................................................................

..................................................................................................................

..................................................................................................................

..................................................................................................................



## ವೃಕ್ಷ ಮಾತೆ - ಸಾಲು ಮರದ ತಿಮ್ಮಕ್ಕ



ತಿಮ್ಮಕ್ಕ ಅವರು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ ಜನಿಸಿದರು. ತಂದೆ ಚಿಕ್ಕರಂಗಯ್ಯ, ತಾಯಿ ವಿಜಯಮ್ಮ, ಪತಿ ಚಿಕ್ಕಯ್ಯ. ಅವರಿಗೆ ಮಕ್ಕಳಿರಲಿಲ್ಲ. ತಮಗೆ ಮಕ್ಕಳಿರದ ದುಃಖವನ್ನು ಮರೆಯಲು ಅವರು ಆಲದ ಸಸಿಗಳನ್ನು ನೆಟ್ಟು ತನ್ನ ಮಕ್ಕಳಂತೆ ಭಾವಿಸಿ ಬೆಳೆಸಿದರು. ಪರಿಸರ ಸಂರಕ್ಷಣೆಯಲ್ಲಿ ಇವರ ಮಹತ್ತರವಾದ ಕೊಡುಗೆಗಾಗಿ ಭಾರತದ ರಾಷ್ಟ್ರೀಯ ಪೌರ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಅವರಿಗೆ ಲಭಿಸಿವೆ.

# ಕಲಿಕಾ ಕಣಜ



| ವಿಷಯಗಳು | ಚಟುವಟಿಕೆಗಳು |
|---|---|
| ನೋಟ್ ಪುಸ್ತಕ | ಪ್ರವೇಶ ಚಟುವಟಿಕೆ, ಪ್ರಾಸ ಪದಗಳು, ಉತ್ತರಿಸಿರಿ, ಬದಲಾಯಿಸಿ ಬರೆಯಿರಿ, ಪದ್ಯ ಮುಂದುವರಿಸಿರಿ, ಬರೆಯುವ, ವಿವರಣೆ, ಸರಿಪಡಿಸಿ ಬರೆಯಿರಿ, ಉತ್ತರಿಸಿರಿ, ವಾಕ್ಯಗಳನ್ನು ಪೂರ್ತಿಗೊಳಿಸಿರಿ, ವಿವರಣೆ. |
| ಪಠ್ಯ ಪುಸ್ತಕ | ಪ್ರಾಸ ಪದಗಳು, ಬದಲಾಯಿಸಿ ಬರೆಯಿರಿ, ಪದ್ಯ ಮುಂದುವರಿಸಿರಿ, ಸರಿಪಡಿಸಿ ಬರೆಯಿರಿ, ವಾಕ್ಯ ಪೂರ್ತಿಗೊಳಿಸಿರಿ |
| ಪೋರ್ಟ್‌ಫೋಲಿಯೊ | ರಚನೆಗಳು |
| ಭಿತ್ತಿಪತ್ರಿಕೆ | ರಚನೆಗಳು |
| ಬಾಲಸಭೆ | ನಾಟಕ |

# ಪದಕೋಶ

## ಘಟಕ 1

| | | |
|---|---|---|
| ಅಚ್ಚುಮೆಚ್ಚು | - | ಇಷ್ಟ |
| ಅಡವಿ | - | ಕಾಡು, ಅರಣ್ಯ, ಕಾನನ, ವನ |
| ಆಗರ | - | ವಾಸಸ್ಥಳ, ಬೀಡು, ವಸತಿ |
| ಆಹ್ವಾನಿಸು | - | ಆಮಂತ್ರಿಸು |
| ಕಂಪು | - | ಪರಿಮಳ |
| ಕಲರವ | - | ಪಕ್ಷಿಗಳ ಚಿಲಿಪಿಲಿ ಧ್ವನಿ |
| ಕಳೆಗುಂದು | - | ಕಾಂತಿಹೀನ, ಬಾಡು, ಸೊರಗು |
| ಗಾಯನ | - | ಹಾಡು |
| ಗೋಂದು | - | ಅಂಟು |
| ಜಂತಿ | - | ಮರದ ಚೌಕಟ್ಟು |
| ತೋಪು | - | ತೋಟ |
| ದಂಡು | - | ಗುಂಪು |
| ನೊಂದುಕೊಳ್ಳು | - | ಬೇಸರಿಸು, ದುಃಖಿಸು |
| ಪತ್ರೆ | - | ಎಲೆ |
| ಬಣಗುಟ್ಟು | - | ಶೂನ್ಯತೆ, ಬರಿದು |
| ಬಲಿತು | - | ಬೆಳೆದು |
| ಮರುಕಗೊಳ್ಳು | - | ದುಃಖಪಡು, ಅನುಕಂಪ |
| ಮಾಲಿಕ | - | ಯಜಮಾನ, ಒಡೆಯ, ಧಣಿ |
| ಸಾಗರ | - | ಸಮುದ್ರ, ಕಡಲು, ಶರಧಿ |

| | | |
|---|---|---|
| ಸುಮ | - | ಹೂವು |
| ಸಂಭ್ರಮ | - | ಸಡಗರ, ಉತ್ಸಾಹ, ಉಲ್ಲಾಸ |
| ಸೊಂಪು | - | ಸಮೃದ್ಧಿ, ಹುಲುಸಾಗಿ |
| ಸ್ಥಾಪಿಸು | - | ನೆಲೆಗೊಳಿಸು |
| ಹಿಂಡು | - | ಗುಂಪು |
| ಹೊನ್ನು | - | ಚಿನ್ನ, ಬಂಗಾರ, ಕನಕ |

## ಘಟಕ 2

| | | |
|---|---|---|
| ಅವಲಂಬಿಸು | - | ಆಶ್ರಯಿಸು |
| ಋಣ | - | ಕರ್ತವ್ಯ |
| ಕಳ | - | ಸಾಲು |
| ಕೃತಜ್ಞತೆ | - | ಉಪಕಾರ ಸ್ಮರಣೆ |
| ಕ್ಷೇಮ | - | ಏಳಿಗೆ, ಅಭಿವೃದ್ಧಿ |
| ನಳನಳಿಸು | - | ಹೊಳೆಯು |
| ನಿಂದು | - | ನಿಂತು |
| ಪಾವನ | - | ಸಾರ್ಥಕ, ಪವಿತ್ರ |
| ಪ್ರಾಧಾನ್ಯತೆ | - | ಮಹತ್ವ |
| ಬಾಂಧವ್ಯ | - | ಸಂಬಂಧ, ನಂಟು |
| ಮನುಜ | - | ಮನುಷ್ಯ |
| ಮುದ | - | ಸಂತೋಷ |
| ವಂದಿಸು | - | ನಮಸ್ಕರಿಸು |
| ಶ್ರಮ | - | ಕಷ್ಟ |

| | | |
|---|---|---|
| ಸಾರ | - | ಸತ್ವ, ತಿರುಳು |
| ಸಿದ್ಧವಾದ | - | ತಯಾರಾದ |
| ಹೈನುಗಾರಿಕೆ | - | ಪಶುಸಂಗೋಪನೆ |
| ಹೊಲ | - | ಗದ್ದೆ |

## ಘಟಕ 3

| | | |
|---|---|---|
| ಆರಾಧಿಸು | - | ಪೂಜಿಸು |
| ಉಡುಗೊರೆ | - | ಬಹುಮಾನ, ಕೊಡುಗೆ |
| ಔತಣ | - | ವಿಶೇಷ ಭೋಜನ |
| ಕೊಂಡಾಡು | - | ಹೊಗಳು, ಗುಣಗಾನ ಮಾಡು |
| ಖ್ಯಾತ | - | ಪ್ರಸಿದ್ಧ |
| ಗೋದಲಿ | - | ಹಟ್ಟಿ, ದನದ ಕೊಟ್ಟಿಗೆ |
| ಪಠಿಸು | - | ವಾಚಿಸು |
| ಪ್ರಸಂಗ | - | ಕಥಾವಸ್ತು |
| ಮನೋರಂಜನೆ | - | ಮನಸ್ಸನ್ನು ರಂಜಿಸುವ |
| ಶ್ರದ್ಧೆ | - | ಏಕಾಗ್ರತೆ, ಗಮನ |
| ಸಂಕೇತ | - | ಗುರುತು, ಸೂಚನೆ |
| ಸಂಹಾರ | - | ನಾಶ |
| ಸಜ್ಜಿಕೆ | - | ತಯಾರಿ |
| ಸತ್ಕರ್ಮ | - | ಒಳ್ಳೆಯ ಕಾರ್ಯ |
| ಸನ್ನಿವೇಶ | - | ಸಂದರ್ಭ |

## ಘಟಕ 4

| | | |
|---|---|---|
| ಅರಸುತ | - | ಹುಡುಕುತ |
| ಆಪತ್ತು | - | ಅಪಾಯ |
| ಆರೈಕೆ | - | ಪೋಷಿಸು |
| ಕೋರಿಕೆ | - | ಬೇಡಿಕೆ |
| ಚಾಲಕ | - | ವಾಹನ ಚಲಾಯಿಸುವವ |
| ದಡ | - | ತೀರ |
| ದುಗುಡ | - | ದುಃಖ, ಬೇಸರ |
| ನೆರವು | - | ಸಹಾಯ |
| ಪಂಜರ | - | ಗೂಡು |
| ಬಂಧನ | - | ಸೆರೆ |
| ಬಳಗ | - | ಒಕ್ಕೂಟ |
| ಬಾಳು | - | ಜೀವನ, ಬದುಕು |
| ಮನೋಭಾವ | - | ಮನಸ್ಸು |
| ಮೊರೆ | - | ಬೇಡಿಕೊಳ್ಳು |
| ಯಾತ್ರೆ | - | ಪ್ರಯಾಣ |
| ಸಮೀಪ | - | ಹತ್ತಿರ |
| ಹೊರೆಯು | - | ತುಂಬಿಸು |

## ಘಟಕ 5

| | | |
|---|---|---|
| ಆರಿಸು | - | ತಣಿಸು |
| ಇಲಾಖೆ | - | ವಿಭಾಗ |

| | | |
|---|---|---|
| ಕರಿದತಿಂಡಿ | - | ಎಣ್ಣೆಯಲ್ಲಿ ಹುರಿದ ತಿಂಡಿ |
| ತುತ್ತಾಗು | - | ಈಡಾಗು, ಒಳಗಾಗು |
| ಪ್ರತಿಭಾವಂತ | - | ಬುದ್ಧಿವಂತ |
| ಬಚ್ಚಲುಮನೆ | - | ಸ್ನಾನಗೃಹ |
| ಬಳಸು | - | ಉಪಯೋಗಿಸು |
| ಮಲಿನ | - | ಕೊಳಕು |
| ಮಹತ್ವ | - | ಪ್ರಾಧಾನ್ಯ |
| ವೈಯಕ್ತಿಕ | - | ವ್ಯಕ್ತಿಗತ |
| ಶುಭ್ರವಾದ | - | ಶುಚಿಯಾದ, ಸ್ವಚ್ಛವಾದ |
| ಸಂಪತ್ತು | - | ಐಶ್ವರ್ಯ, ಸಿರಿ |
| ಸಾರ್ವಜನಿಕ | - | ಎಲ್ಲರಿಗೂ ಸಂಬಂಧಪಟ್ಟ |
| ಸೇವಿಸು | - | ತಿನ್ನು |
| ಹವ್ಯಾಸ | - | ಅಭಿರುಚಿ |

## ಘಟಕ 6

| | | |
|---|---|---|
| ಅಪರಿಚಿತ | - | ಪರಿಚಯ ಇಲ್ಲದ |
| ಈಶ | - | ದೇವರು |
| ಒಪ್ಪೊತ್ತು | - | ಒಂದು ಹೊತ್ತು |
| ಘಟನೆ | - | ಸಂಗತಿ, ವಿಷಯ |
| ತ್ಯಾಗ | - | ಬಿಟ್ಟುಕೊಡುವುದು |
| ದುಡಿತ | - | ಕೆಲಸ |
| ಧನ್ಯ | - | ಕೃತಾರ್ಥ |

| | | |
|---|---|---|
| ಧಾವಿಸು | - | ಓಡು |
| ಪಣ | - | ಪ್ರತಿಜ್ಞೆ, ಶಪಥ |
| ಪರಿವೆ | - | ಗೊಡವೆ, ಗಮನ |
| ಪಹರೆ | - | ಕಾವಲು |
| ಪುತ್ರ | - | ಮಗ, ಸುತ |
| ಪಾದಚಾರಿ | - | ಕಾಲ್ನಡಿಗೆಯವ |
| ಪಾರಾಗು | - | ತಪ್ಪಿಸಿಕೊಳ್ಳು |
| ಮಚ್ಚು | - | ಕೊಡಲಿ |
| ಯೋಧ | - | ಸೈನಿಕ |
| ರಕ್ಷಕ | - | ಪಾಲಕ |
| ವರ್ತನೆ | - | ಸ್ವಭಾವ |
| ಸದೆಬಡಿಯು | - | ಕೊಲ್ಲು |
| ಸುತ | - | ಮಗ |
| ಸೆಟೆದು | - | ಎದುರಿಸು |
| ಸೆಣಸು | - | ಹೋರಾಡು |
| ಹೊರಳಾಡು | - | ಉರುಳಾಡು |

## ಘಟಕ 7

| | | |
|---|---|---|
| ಕಾಯಕ | - | ಕೆಲಸ |
| ಕುಂದಣ | - | ಪುತ್ಥಳಿ ಬಂಗಾರ, ಚೊಕ್ಕ ಚಿನ್ನದಲ್ಲಿ ಮುತ್ತುರತ್ನ ಇರಿಸುವುದು |
| ಕುಟ್ಟು | - | ಬಡಿಯು |
| ಕುಸುರಿ | - | ನಾಜೂಕು, ಬೆಡಗು, ಬಿನ್ನಾಣ, ಒಯ್ಯಾರ |

| | | |
|---|---|---|
| ಗಡಿಗೆ | - | ಮಡಿಕೆ |
| ಗೈಯು | - | ಮಾಡು |
| ಪ್ರಯಾಣ | - | ಪಯಣ, ಯಾತ್ರೆ |
| ಭಯ | - | ಹೆದರಿಕೆ |
| ಬೀದಿ | - | ರಸ್ತೆ |
| ತುಳಿಯು | - | ಮೆಟ್ಟು |
| ತಂತ್ರ | - | ಉಪಾಯ |
| ದಾತ | - | ನೀಡುವವ |
| ನಿರ್ಮಿಸು | - | ತಯಾರಿಸು |
| ನೆರವು | - | ಸಹಾಯ |
| ಮರುಕ | - | ಬೇಸರ, ದುಃಖ, ಸಂಕಟ |
| ಮಿರುಗು | - | ಹೊಳೆಯು |
| ಯುದ್ಧ | - | ಕದನ |
| ವಸನ | - | ವಸ್ತ್ರ |
| ವಿಶ್ರಮ | - | ವಿಶ್ರಾಂತಿ |
| ಸಲಹು | - | ಸಾಕು |
| ಸಜ್ಜುಗೊಳಿಸು | - | ಅಣಿಗೊಳಿಸು, ಸಿದ್ಧಗೊಳಿಸು |
| ಸ್ಥಾನಮಾನ | - | ಗೌರವ |
| ಸೊರಗಿ | - | ಕಂಗಾಲಾಗಿ, ಬಡಕಲಾಗಿ |
| ಹದ | - | ಹಸನು |
| ಹಲ | - | ನೇಗಿಲು |
| ಹೂಜಿ | - | ಮಣ್ಣಿನ ಕುಡಿಕೆ |

## ಘಟಕ 8

| | | |
|---|---|---|
| ಆಕಸ್ಮಿಕ | - | ಅನಿರೀಕ್ಷಿತ |
| ಕಂಗಾಲು | - | ಸೊರಗು, ಬಡಕಲು |
| ಕೊರಗು | - | ನೊಂದುಕೊಳ್ಳು, ಬೇಸರಿಸು |
| ಜಾನುವಾರು | - | ದನಕರುಗಳು |
| ತಳ್ಳು | - | ದೂಡು |
| ನೂತನ | - | ಹೊಸತು, ನವೀನ |
| ಪೋಷಿಸು | - | ಸಲಹು |
| ಪ್ರಾಮಾಣಿಕತೆ | - | ಸತ್ಯಸಂಧತೆ |
| ಬರಗಾಲ | - | ಕ್ಷಾಮ |
| ಬಿಡುವು | - | ವಿರಾಮ |
| ಬೆಚ್ಚನೆ | - | ಬಿಸಿ |
| ಮಾರುಹೋಗು | - | ಆಕರ್ಷಿತನಾಗು |
| ಮುಗಿಬೀಳು | - | ಮೇಲೆ ಮೇಲೆ ಬೀಳು |
| ಮುಡಿಪಾಗಿಡು | - | ಸಮರ್ಪಿಸು |
| ವ್ಯವಧಾನ | - | ತಾಳ್ಮೆ, ಸಂಯಮ, ಸಹನೆ |
| ಸೋಜಿಗ | - | ಆಶ್ಚರ್ಯ |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಆನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in